ಶ್ರೀಃ

ಸುಲಭವಾದ ಕನ್ನಡದಿಂದ ಉದಾಹರಣ

ಸಹಿತವಾಗಿರುವ

ಜಾತಕ-ಸ್ವಯಂ-ಶಿಕ್ಷಕ.

ಗ್ರಂಥಕರ್ತೃ:- ವೇ। ಗಣೇಶ ನಾರಾಯಣ ಭಟ್ಟ, ನಾಜಗಾರ.

ಈ ಗ್ರಂಥವು

ಶ್ರೀ॥ ಗಣಪತಿ ರಾಮರಾವ ಮಾಸೂರ,

ಇವರಿಂದ

ಶ್ರೀ ರಾಮಕೃಷ್ಣ ಪ್ರಿಂಟಿಂಗ ವರ್ಕ್ಸ್, ಲಿಮಿಟೆಡ್, ಕುಮಟಾದಲ್ಲಿ ಮುದ್ರಿತವಾಗಿ

ವೇ। ರಾಮಕೃಷ್ಣ ನಾರಾಯಣ ಭಟ್ಟ, ನಾಜಗಾರ,

ಇವರಿಂದ

ಜ್ಯೋತಿಷ ಕಾರ್ಯಾಲಯ ನಾಜಗಾರದಲ್ಲಿ ಪ್ರಕಟಿಸಲ್ಪಟ್ಟಿತು.

೧೯೨೯.

ಬೆಲೆ ೮ ಆಣೆ] [ಟ. ಖ. ಪ್ರತ್ಯೇಕ.

ವಿಜ್ಞಾಪನೆ.

ಸಾದಾ ಜಾತಕದಿಂದ ಸಾಮಾನ್ಯವಾಗಿ ಫಲನಿರ್ಣಯ ಮಾಡಲಿಕ್ಕೆ ಬರುತ್ತಿದ್ದರೂ ಅಷ್ಟು ಸೂಕ್ಷ್ಮರೀತ್ಯಾ ವಿಚಾರಿಸಲನುಕೂಲವಾಗುವದಿಲ್ಲ. ಗ್ರಹಸ್ಫುಟ, ಭಾವಸ್ಫುಟ, ಭಾವಸಂಧಿ, ಲಗ್ನಸ್ಫುಟ ಮೊದಲಾದವುಗಳಿಂದ ಜಾತಕಕುಂಡಲಿಯನ್ನು ತಯಾರಿಸಿದರೆ ಗ್ರಹದ ನಿಜಸ್ಥಿತಿ (ಬಲಾಬಲ) ಗಳು ಸ್ಪಷ್ಟವಾಗಿ ತಿಳಿದು ಬರುತ್ತವೆ. ಆದರಿಂದ ಹೇಳಿದ ಫಲವು ಹತ್ರಕ್ಕೆ ಪತ್ತೂ ನಿಜವಾಗಲೇಬೇಕು.

ನಮ್ಮ " ಜ್ಯೋತಿಷಕಾರ್ಯಾಲಯ ನಾಜಗಾರ " ಎಂಬ ಸಂಸ್ಥೆಯಲ್ಲಿ ದೃಕ್ಸಿದ್ಧಗಣಿತ ಪ್ರಕಾರ ಗ್ರಹಸ್ಫುಟಾದಿಗಳನ್ನು ಮಾಡಿ ಜಾತಕವು ಬರೆಯಲ್ಪಡುತ್ತದೆ. ಕರ್ಣಾಟಕ ಜನತೆಗೆ ಮನೆಯಲ್ಲಿಯೇ ಕುಳಿತು ಟಪಾಲದ್ವಾರಾ ಜ್ಯೋತಿಷ ವಿಷಯವು ಸೌಕರ್ಯದಿಂದ ದೊರೆಯಬೇಕೆಂಬ ಸದ್ಧೇತುವಿನಿಂದ ಸುಧಾರಕರ ಆಗ್ರಹದ ಸೂಚನೆಯ ಪ್ರಕಾರ " ಜ್ಯೋತಿಷ ಕಾರ್ಯಾಲಯವು " ಸ್ಥಾಪಿಸಲ್ಪಟ್ಟಿದೆ.

ಸಾದಾ ಜಾತಕಕ್ಕೆ ೦–೧೨–೦.

ಸ್ಫುಟಸಹಿತ ಜಾತಕ ೨–೦–೦.

ಫಲನಿರ್ಣಯ ಸಂಪೂರ್ಣ ಆಯುರ್ದಾಯ ಸಹಿತ ರೂ. ೨೫ ರಿಂದ ೫೦ ರ ವರೆಗೆ.

ಬರೇ ಒಂದು ವರ್ಷದ ಫಲಕ್ಕೆ ೫–೦–೦.

ವಿಶೇಷ ಮಾಹಿತಿಯು ಪತ್ರದ್ವಾರಾ.

ನಮ್ಮ ವಿಳಾಸ –

ಮೆನೇಜರ,

ಜ್ಯೋತಿಷ ಕಾರ್ಯಾಲಯ-ನಾಜಗಾರ,

ಪೋ. ಕಾಸರಕೋಡ, (ಹೊನ್ನಾವರ)

ಜಿ. ಕಾರವಾರ.

ಪ್ರಸ್ತಾವನೆಯು.

ಜಾತಕ ಕುಂಡಲಿಯೆಂದರೆ ಪೂರ್ವ ಜನ್ಮದ–ಸುಕೃತ-ದುಷ್ಕೃತಗಳನ್ನು ತೋರಿಸುವ ಕೈಗನ್ನಡಿಯೆನ್ನಬಹುದು. ಜನನ ಘಟಿಯು ಸರಿಯಾಗಿ ಉಪಲಬ್ಧವಾಗಿ ತಯಾರಿಸಿದ ಶುದ್ಧ ಜಾತಕ ಫಲವು ಎಂದೂ ಸುಳ್ಳಾಗುವ ಸಂಭವವಿರುವದಿಲ್ಲ. **पूर्वजन्मार्जितं कर्म शुभं वा यदि वाशुभम् । तस्यपक्तिं ग्रहाः सर्वे सूचयंतीह जन्मनि । (प्रा० मा० अ० १)** ಇತ್ಯಾದಿ ಆಧಾರಗಳಿಂದ ಈ ಮಾತು ಸಿದ್ಧವಾಗುವದು. ಲೋಕದ ಅನುಭವವೂ ಈ ವಾಕ್ಯವನ್ನು ಪುಷ್ಟಿಗೊಳಿಸುತ್ತದೆ. ಜಗತ್ತಿನಲ್ಲಿ ಮಹನೀಯರ ಮಹತ್ವದ ಯೋಗಗಳು ಅವರ ಜಾತಕ ಕುಂಡಲಿಯಲ್ಲಿದ್ದೇ ಇರುತ್ತವೆ. ಹತಭಾಗ್ಯ, ಪಶುತುಲ್ಯರಾದ ಜನರ ಜಾತಕದಲ್ಲೂ ಗ್ರಹಗಳು ಅಂಥ ಸ್ಥಿತಿಯಲ್ಲೇ ಇರುತ್ತವೆ. ಬಹು ಜಾತಕ ಕುಂಡಲಿಯನ್ನು ವಿಮರ್ಶಿಸಿ ನೋಡಿದ ಜ್ಯೋತಿಷಜ್ಞರಿಗೆ ಈ ವಿಷಯವು ಚನ್ನಾಗಿ ತಿಳಿದಿರುತ್ತದೆ.

ಈ ಮಧ್ಯದಲ್ಲಿ ಪಂಚಾಂಗ ಶುದ್ಧಿಗಾಗಿ ಎರಡು ಮಾತುಗಳನ್ನು ಹೇಳಿದರೆ ಬಹುಶಃ ಅಪ್ರಸ್ತುತವಾಗಲಿಕ್ಕಿಲ್ಲ. ಈಗಿನ ಕಾಲದಲ್ಲಿ ಗ್ರಹಲಾಘವಾದಿ ಹಳೆಯ ಕರಣ ಗ್ರಂಥಗಳಿಂದ ತಯಾರಿಸಲ್ಪಡುವ ಪಂಚಾಂಗಗಳೆಲ್ಲ ಅಶುದ್ಧವೆಂಬದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಸದ್ಯಕ್ಕೆ ಪುಣೆ ಕಮಿಟಿಯಲ್ಲಿ ತಯಾರಾದ " ಕರಣಕಲ್ಪಲತಾ " ಅಥವಾ ರಾ। ಕೇತಕರರ " ಜ್ಯೋತಿರ್ಗಣಿತ " ಎಂಬ ಅನುಕ್ರಮದಿಂದ ರೈವತ, ಚೈತ್ರ ಪಕ್ಷೀಯ ಕರಣ ಗ್ರಂಥಗಳಿಂದ ತಯಾರಾಗುವ ಪಂಚಾಂಗಗಳು ದೃಕ್ಪ್ರತೀತಿಪ್ರದಗಳಾದಕಾರಣ ಅವುಗಳಿಂದಲೇ ಜಾತಕಗಳನ್ನು ತಯಾರಿಸುವದು ಶಾಸ್ತ್ರಸಮ್ಮತವೂ ಅತಏವ ಅವಶ್ಯಕರ್ತವ್ಯವೂ ಆಗಿರುತ್ತದೆ. ಈ ಜಾತಕ ಸ್ವಯಂಶಿಕ್ಷಕದಲ್ಲಿ ಗ್ರಂಥಕರ್ತರು ಉದಾಹರಣೆಗೆ " ಜ್ಯೋತಿರ್ಗಣಿತ " ದಿಂದ ತಯಾರಿಸಿದ ಪಂಚಾಂಗವನ್ನೇ ಕೊಟ್ಟಿರುವರು. ಇದು ಸ್ತುತ್ಯವು.

ಹಳೆಯ ಪದ್ಧತಿಯ ಪಂಚಾಂಗಗಳಲ್ಲಿ ತಿಥ್ಯಾದಿಗಳ ಘಟಿಗಳ ಪರಮಾವಧಿಯು ೬೫. ಕಡಿಮೆಯೆಂದರೆ ೫೪ ಕ್ಕೆ ಕಡಿಮೆಯಿರುತ್ತಿರಲಿಲ್ಲ. ಇದಕ್ಕೆ " ಬಾಣವೃದ್ಧೀರಸಕ್ಷಯಃ " ಇತ್ಯಾದಿ ವಾಕ್ಯಗಳು ಆಧಾರವಾಗಿದ್ದು ಶುದ್ಧಪಂಚಾಂಗದಲ್ಲಿಯಾದರೆ ಸಂಸ್ಕಾರವಶಾತ್ ೬೮ ಪರಮ. ೫೦ ಕ್ಷಯ. ಅಂದರೆ ಅಷ್ಟವೃದ್ಧಿರ್ದಶ ಕ್ಷಯಃ ಹೀಗೆ ಪ್ರಾಪ್ತವಾಗುವದು. ಇದರಮೇಲಿಂದ ಹಳೆ, ಹೊಸ ಪದ್ಧತಿಯ ಪಂಚಾಂಗಗಳ ಮೇಲಿಂದ ವಸ್ತುಸ್ಥಿತಿಯು ಹೇಗೆ ಹೆಚ್ಚುಕಡಿಮೆ

ಯಾಗುತ್ತದೆಂಬದನ್ನು ತಿಳಕೊಳ್ಳಬಹುದು. ಜಾತಕ ತಯಾರಿಸುವವರು ಪಂಚಾಂಗದ ಕಡೆಗೆ ಲಕ್ಷ್ಯಗೊಡುವದು ಮಹತ್ವದ ವಿಷಯವಾಗಿದೆ.

ನಾಸ್ತಿಕರನ್ನುಳಿದು ಸಮಸ್ತಜನರೂ ಜಾತಕದ ಫಲಾಫಲಗಳನ್ನು ತಿಳಿಕೊಳ್ಳಲಪೇಕ್ಷಿಸುವದು ಸಹಜವು. ಯುರೋಪ ಖಂಡದಲ್ಲಿ ಸಹ ಫಲಜ್ಯೋತಿಷದ ಪ್ರಗತಿಯಾಗುತ್ತ ನಡೆದಿರುವದು. ಫಲಾಫಲಗಳನ್ನು ಹೇಳುವ ಗ್ರಂಥಗಳಿಷ್ಟೋ ಆಗಿವೆ. ಗುರು ಸಹಾಯವಿಲ್ಲದೆ ಮನೆಯಲ್ಲಿಯೇ ಕುಳಿತು ಜಾತಕ ಕುಂಡಲಿಯನ್ನು ಕಲಿಯುವ ಪುಸ್ತಕವು ಕನ್ನಡದಲ್ಲಿರುವದಿಲ್ಲವೆಂದರೂ ಸಲ್ಲುವದು. ಕೆಲಜಾತಕವನ್ನು ಮಾಡಲಿಕ್ಕೆ ಕಲಿಯುವದು ಜ್ಯೋತಿಷ್ಕರ ಮೊದಲನೆಯ ಕೆಲಸವು. ಆ ಮೇಲಲ್ಲವೇ ಫಲಹೇಳುವದು? ಕಾರಣ ಈ ಪುಸ್ತಕದಿಂದ ಕನ್ನಡಿಗರಿಗೊಂದಡಚಣಿಯು ದೂರಾಗಿರುವದೆಂದರೆ ಅತ್ಯುಕ್ತಿಯಾಗಲಿಕ್ಕಿಲ್ಲ. ಕನ್ನಡನಾಡಿನ ಬಾಂಧವರು ಈ ಪ್ರಥಮ ಪ್ರಯತ್ನವನ್ನಾದರಿಸಿ ಗ್ರಂಥಕರ್ತರನ್ನು ಪ್ರೋತ್ಸಾಹಿಸಿದರೆ ಕರ್ಣಾಟಕ ದೇವಿಯು ಸುಪ್ರಸನ್ನತೆಗೆ ಪಾತ್ರರಾಗುವರೆಂದಾಶಿಸುವ,

ಕಾಸರಕೋಡ,
ಶ. ೧೮೫೧ ಜ್ಯೇ. ಶು. ೧೫.

ವಿದ್ಯಾವತಾಮನುಚರಃ
‘ ಶಂಭುಶರ್ಮಾ ನಾಜಗಾರ ’

॥ ಶ್ರೀ ಗಣೇಶಾಯ ನಮಃ ॥

ಮಂಗಲಾಚರಣೆ.

॥ ಸತ್ವಾ ವರಾಹಮಿಹಿರಪ್ರಭೃತೀಂಚ್ಛಾಸ್ತ್ರಕೋಪಿದಾನ್ ॥
॥ ಬಾಲಾನಾಂ ಸುಖಬೋಧಾಯ ಕುರ್ವೇ ಜಾತಕಶಿಕ್ಷಕಂ ॥

ಜ್ಯೋತಿಃಶಾಸ್ತ್ರ ಪಾರಂಗತರಾದ ವರಾಹಮಿಹಿರ–ಭಾಸ್ಕರಾಚಾರ್ಯ ಮೊದಲಾದವರನ್ನು ನಮಸ್ಕರಿಸಿ ಬಾಲಕರಿಗೆ ಸುಖದಿಂದ ಜ್ಞಾನವಾಗುವದಕ್ಕೋಸ್ಕರ ಈ ಜಾತಕ ಸ್ವಯಂಶಿಕ್ಷಕವನ್ನು ರಚಿಸುವೆನು.

ಜ್ಯೋತಿಃಶಾಸ್ತ್ರವನ್ನಭ್ಯಾಸ ಮಾಡಲಿಚ್ಛೆಯುಳ್ಳವರು ಮೊದಲು ಹಿಂದೂ ಸಂವತ್ಸರಾದಿಗಳ ಬಾಯಿಪಾಠಗಳನ್ನು ಕಲಿತುಕೊಳ್ಳಬೇಕು. ಮೊದಮೊದಲು ಖಾಸಗಿ ಶಾಲೆಯಲ್ಲಿ ಶಿಕ್ಷಕರು ಹಿಂದೂ ಜನರ ಸಂಬಂಧಿ ಸಂವತ್ಸರ-ಅಯನ ಋತು, ಮಾಸ, ತಿಥಿ, ನಕ್ಷತ್ರ, ಯೋಗಾದಿ ವಿಷಯಗಳನ್ನು ಕಲಿಸುತ್ತಿದ್ದರು. ಈಗಿನಕಾಲದಲ್ಲಿ ಉಚ್ಚ ಶಿಕ್ಷಣದಲ್ಲಿ ಉತ್ತೀರ್ಣರಾದವರಿಗೆ ಕೇವಲ ಸಂವತ್ಸರಗಳ ಹೆಸರು ಸಹ ಬರುವದಿಲ್ಲ. ಇದೆಲ್ಲ ಹಿಂದೂ ಧರ್ಮವು ಕ್ರಮೇಣ ನಾಮಶೇಷವಾಗುವ ಲಕ್ಷಣವಲ್ಲವೇ?

ಕೋಷ್ಟಕ ನಂಬರ ೧.

ಕಾಲಮಾನ.	
೬೦ ವಿಪಳ (ಗುರ್ವಕ್ಷರ)	= ೧ ಪಳ (ವಿಘಟಿ)
೬೦ ಪಳ (ವಿಘಟಿ)	= ೧ ಘಟಿ (ಘಳಿಗೆ)
೬೦ ಘಟಿ	= ೧ ದಿವಸ
೧೫ ದಿವಸ	= ೧ ಪಕ್ಷ
೨ ಪಕ್ಷ } ೩೦ ದಿವಸ }	= ೧ ಮಾಸ (ತಿಂಗಳ)
೨ ಮಾಸ	= ೧ ಋತು
೩ ಋತು	= ೧ ಅಯನ
೨ ಅಯನ	= ೧ ವರುಷ
೨॥ ಪಳ (ವಿಘಟಿ)	= ೧ ಮಿನಿಟು
೬೦ ಮಿನಿಟು	= ೧ ತಾಸು (೧ ಘಂಟೆ)
೨೪ ತಾಸು	= ೧ ದಿವಸ.

ಕಲಿಯತಕ್ಕ ಬಾಯಿಪಾಠಗಳು ಬಂದ ನಂತರ ವಜಾಬಾಕಿ, ಬೇರೀಜು, ಗುಣಾಕಾರ, ಭಾಗಾಕಾರ ಇವುಗಳನ್ನು ಕಲಿತುಕೊಂಡು ಪಂಚಾಂಗ ನೋಡುವ ಮಾಹಿತಿಯನ್ನು ಬಲ್ಲಾದವರಕಡೆಯಿಂದ ತಗೊಳ್ಳುವದು. ಇದು ಪೂರ್ವತಯಾರಿಯು. ಇಷ್ಟನ್ನು ತಯಾರಿಸಿದ ನಂತರ ಈ ಜಾತಕಸ್ವಯಂಶಿಕ್ಷಕವನ್ನು ಮನನ ಮಾಡಿದರೆ ಜಾತಕ ಮಾಡಲಿಕ್ಕೆ ಬರುವದು. ಮುಂದೆ ಕೊಡುವ ಕೋಷ್ಟಕಾದಿಗಳನ್ನು ತಿಳಿದುಕೊಳ್ಳಿರಿ

ಟಿ.— ಸರ್ವತ್ರ ಪ್ರಚಾರದಲ್ಲಿರುವ ಟಾಯಿಮ (ವೇಳೆ) ಗೆ ಸ್ಟೆಂಡರ್ಡ

ಟಾಯಿಮೆನ್ನುವರು. ಸಾಮಾನ್ಯವಾಗಿ ಪಂಚಾಂಗದಲ್ಲಿ ಮುಂಬಯಿ ಟಾಯಿಮನ್ನಿಡುವರು. ಮುಂಬಯಿ ಮದ್ರಾಸ್-ಟಾಯಿಮುಗಳಲ್ಲಿ ೩೦ ಮಿನಿಟು ಅಂತರವಿರುತ್ತದೆ. ಕಾರಣ ಮುಂಬಯಿ ಟಾಯಿಮಿಗೆ ೩೦ ಮಿನಿಟನ್ನು ಕೂಡಿಸಿದರೆ ಮದ್ರಾಸ್ ಟಾಯಿಮ್ ಆಗುವದು. ೩೯ ಮಿನಿಟನ್ನು ಕೂಡಿಸಿದರೆ "ಸ್ಟೆಂಡರ್ಡ" ಟಾಯಿಮ್ ಆಗುವದು. ಉದಾಹರಣಾರ್ಥ: ಮುಂಬಯಿಯಲ್ಲಿ ೬ ಬಡಿಯುವಾಗ ಮದ್ರಾಸ್‌ದಲ್ಲಿ ೬ ಘಂಟೆ ೩೦ ಮಿನಿಟು ಬಡಿಯುತ್ತದೆ. ಆ ಕಾಲಕ್ಕೆ ಸ್ಟೆಂಡರ್ಡ ಟಾಯಿಮ್ ೬-೩೯ ಆಗುವದು. ಕಾರಣ ಯಾವುದಾದರೊಂದು ವೇಳೆಯಲ್ಲಿ ಟಾಯಿಮ್ ನೋಡುವದಾದರೆ ಪಂಚಾಂಗದಲ್ಲಿರುವ ಸೂರ್ಯೋದಯ ಅಥವಾ ಅಸ್ತದ ಟಾಯಿಮಿಗೆ ೩೯ ಮಿನಿಟನ್ನು ಕೂಡಿಸಿ ಆದ ಸ್ಟೆಂಡರ್ಡ ಟಾಯಿಮನ್ನು ನಿಕ್ಕಿ ಹಿಡಕೊಳ್ಳಬೇಕು.

ಕೋಷ್ಟಕ ನಂ. ೨.

ಹಿಂದೂ-ಸಂವತ್ಸರಗಳು ೬೦.			
೧ ಪ್ರಭವ	೧೬ ಚಿತ್ರಭಾನು	೩೧ ಹೇಮಲಂಬಿ	೪೬ ಪರಿಧಾವಿ
೨ ವಿಭವ	೧೭ ಸುಭಾನು	೩೨ ವಿಲಂಬಿ	೪೭ ಪ್ರಮಾದಿ
೩ ಶುಕ್ಲ	೧೮ ಕಾರಣ	೩೩ ವಿಕಾರಿ	೪೮ ಆನಂದ
೪ ಪ್ರಮೋದ	೧೯ ಪಾರ್ಥಿವ	೩೪ ಶಾರ್ವರಿ	೪೯ ರಾಕ್ಷಸ
೫ ಪ್ರಜಾಪತಿ	೨೦ ವ್ಯಯ	೩೫ ಪ್ಲವ	೫೦ ನಳ
೬ ಆಂಗಿರಸ	೨೧ ಸರ್ವಜಿತು	೩೬ ಶುಭಕೃತು	೫೧ ಪಿಂಗಲ
೭ ಶ್ರೀಮುಖ	೨೨ ಸರ್ವಧಾರಿ	೩೭ ಶೋಭಕೃತು	೫೨ ಕಾಲಿಕಾಕ್ಷಿ
೮ ಭಾವ	೨೩ ವಿರೋಧಿ	೩೮ ಕ್ರೋಧಿ	೫೩ ಸಿದ್ಧಾರ್ಥಿ
೯ ಯುವ	೨೪ ವಿಕೃತು	೩೯ ವಿಶ್ವಾವಸು	೫೪ ರೌದ್ರಿ
೧೦ ಧಾತು	೨೫ ಖರ	೪೦ ಪರಾಭವ	೫೫ ದುರ್ಮತಿ
೧೧ ಈಶ್ವರ	೨೬ ನಂದನ	೪೧ ಪ್ಲವಂಗ	೫೬ ದುಂದುಭಿ
೧೨ ಬಹುಧಾನ್ಯ	೨೭ ವಿಜಯ	೪೨ ಕೀಲಕ	೫೭ ರುಧಿರೋದ್ಗಾ [ರಿ
೧೩ ಪ್ರಮಾಥಿ	೨೮ ಜಯ	೪೩ ಸೌಮ್ಯ	೫೮ ರಕ್ತಾಕ್ಷಿ
೧೪ ವಿಕ್ರಮ	೨೯ ಮನ್ಮಥ	೪೪ ಸಾಧಾರಣ	೫೯ ಕ್ರೋಧನ
೧೫ ವಿಷು	೩೦ ದುರ್ಮುಖಿ	೪೫ ವಿರೋಧಿಕೃತ್	೬೦ ಕ್ಷಯ

ಟಿ.— ಒಂದು ಸಂವತ್ಸರಕ್ಕೆ ದಕ್ಷಿಣಾಯನ ಉತ್ತರಾಯಣಗಳೆಂಬೆರಡು ಅಯನಗಳು. ಕರ್ಕಟಕ ಸಂಕ್ರಾಂತಿಯನ್ನಾರಂಭಿಸಿ ೬ ತಿಂಗಳಿಗೆ ದಕ್ಷಿಣಾಯನ

ವೆಂದೂ ಮಕರಸಂಕ್ರಾಂತಿಯಿಂದಾರಂಭಿಸಿ ೬ ತಿಂಗಳಿಗೆ ಉತ್ತರಾಯಣವೆಂದೂ ಅನ್ನುವರು.

ಕೋಷ್ಟಕ ನಂ. ೩.

ಚೈತ್ರಾದಿಮಾಸಗಳು ೧೨; ಋತುಗಳು ೬.											
ಚೈತ್ರ	ವೈಶಾಖ	ಜ್ಯೇಷ್ಠ	ಆಷಾಢ	ಶ್ರಾವಣ	ಭಾದ್ರಪದ	ಆಶ್ವಿನ	ಕಾರ್ತಿಕ	ಮಾರ್ಗಶಿರ	ಪುಷ್ಯ	ಮಾಘ	ಫಾಲ್ಗುಣ
ವಸಂತರ್ತು		ಗ್ರೀಷ್ಮರ್ತು		ವರ್ಷರ್ತು		ಶರದೃತು		ಹೇಮಂತರ್ತು		ಶಿಶಿರರ್ತು	

ಟಿ.— ಎರಡೆರಡು ತಿಂಗಳುಗಳಿಗೆ ಒಂದೊಂದು ಋತುವು. ಇದರಂತೆ ೧೨ ತಿಂಗಳಿಂದ ಮೇಲೆ ಬರೆವಂತೆ ೬ ಋತುಗಳು.

ಕೋಷ್ಟಕ ನಂ. ೪.

ಪಕ್ಷ-ತಿಥಿಗಳು.				
ಶುಕ್ಲ ಪಕ್ಷ		ಕೃಷ್ಣ ಪಕ್ಷ.		ಪಕ್ಷಗಳು.
೧ ಪಾಡ್ಯ	೯ ನವಮಿ	೧ ಪಾಡ್ಯ	೯ ನವಮಿ	
೨ ಬಿದಿಗೆ	೧೦ ದಶಮಿ	೨ ಬಿದಿಗೆ	೧೦ ದಶಮಿ	
೩ ತದಿಗೆ	೧೧ ಏಕಾದಶಿ	೩ ತದಿಗೆ	೧೧ ಏಕಾದಶಿ	
೪ ಚವುತಿ	೧೨ ದ್ವಾದಶಿ	೪ ಚವುತಿ	೧೨ ದ್ವಾದಶಿ	ಎರಡು.
೫ ಪಂಚಮಿ	೧೩ ತ್ರಯೋದಶಿ	೫ ಪಂಚಮಿ	೧೩ ತ್ರಯೋದಶಿ	
೬ ಷಷ್ಠಿ	೧೪ ಚತುರ್ದಶಿ	೬ ಷಷ್ಠಿ	೧೪ ಚತುರ್ದಶಿ	
೭ ಸಪ್ತಮಿ	೧೫ ಹುಣ್ಣಿವೆ	೭ ಸಪ್ತಮಿ	೩೦ ಅಮಾವಾಸ್ಯೆ	
೮ ಅಷ್ಟಮಿ		೮ ಅಷ್ಟಮಿ		

ಟಿ.— ಒಂದೊಂದು ಮಾಸಕ್ಕೆ ೩೦ ತಿಥಿಗಳು. ಪ್ರತಿಪದಿಯಿಂದ ಹುಣ್ಣಿವೆವರೆಗಿನ ೧೫ ದಿವಸಗಳಿಗಾಗುವ ಪಕ್ಷಕ್ಕೆ ಶುಕ್ಲ ಪಕ್ಷವೆಂದೂ ಬಹುಳ ಪ್ರತಿಪದಿಯಿಂದ ಅಮಾವಾಸ್ಯೆ ವರೆಗಿನ ೧೫ ದಿನಗಳಿಗಾಗುವ ಪಕ್ಷಕ್ಕೆ ಕೃಷ್ಣ ಪಕ್ಷವೆಂದೂ ಅನ್ನುವರು.

ಕೋಷ್ಟಕ ನಂ. ೫.

ಅಶ್ವಿನ್ಯಾದಿ ನಕ್ಷತ್ರಗಳು ೨೭ ನಾಮಾಕ್ಷರ ಗಣಯೋಗ್ಯಾದಿ ವಿಚಾರ.

	ನಕ್ಷತ್ರ	ನಾಮಾಕ್ಷರಗಳು	ಯೋನಿ	ವೈರ ಯೋನಿ	ಗಣ	ನಾಡಿ	ಮುಖ	ಗುಣ	ಲಿಂಗ
೧	ಅಶ್ವಿನಿ	ಚು ಚೆ ಚೊ ಲ	ಅಶ್ವ	ಎಮ್ಮೆ	ದೇವ	ಆದಿ	ತಿರ್ಯಕ್	ಕ್ಷಿಪ್ರ	ಪು
೨	ಭರಣಿ	ಲಿ ಲು ಲೆ ಲೋ	ಆನೆ.	ಸಿಂಹ	ಮನುಷ್ಯ	ಮಧ್ಯ	ಅಧಃ	ಉಗ್ರ	ಸ್ತ್ರೀ
೩	ಕೃತ್ತಿಕೆ	ಅ ಇ ಉ ಎ	ಆಡು	ಕಪಿ	ರಾಕ್ಷಸ	ಅಂತ್ಯ	ಅಧಃ	ತೀಕ್ಷ್ಣ	ಸ್ತ್ರೀ
೪	ರೋಹಿಣಿ	ಓ ವಾ ವಿ ವು	ಹಾವು	ಮುಂಗ್ಲಿ	ಮನುಷ್ಯ	ಅಂತ್ಯ	ಊರ್ಧ್ವ	ಸ್ಥಿರ	ಪು
೫	ಮೃಗಶಿರಾ	ವೆ ವೊ ಕಾ ಕಿ	ಸರ್ಪ	ಮುಂಗ್ಲಿ	ದೇವ	ಮಧ್ಯ	ತಿರ್ಯಕ್	ಮೃದು	ನ
೬	ಆರ್ದ್ರ	ಕು ಘ ಙ ಛ	ನಾಯಿ	ಜಿಂಕೆ	ಮನುಷ್ಯ	ಆದಿ	ಊರ್ಧ್ವ	ತೀಕ್ಷ್ಣ	ಸ್ತ್ರೀ
೭	ಪುನರ್ವಸು	ಕೆ ಕೊ ಹಾ ಹಿ	ಬೆಕ್ಕು	ಇಲಿ	ದೇವ	ಆದಿ	ತಿರ್ಯಕ್	ಚರ	ಪು
೮	ಪುಷ್ಯ	ಹು ಹೆ ಹೋ ಡ	ಆಡು	ಕೋತಿ	ದೇವ	ಮಧ್ಯ	ಊರ್ಧ್ವ	ಕ್ಷಿಪ್ರ	ಪು
೯	ಆಶ್ಲೇಷಾ	ಡಿ ಡು ಡೆ ಡೊ	ಬೆಕ್ಕು	ಮೂಷಕ	ರಾಕ್ಷಸ	ಅಂತ್ಯ	ಅಧಃ	ತೀಕ್ಷ್ಣ	ಸ್ತ್ರೀ
೧೦	ಮಘಾ	ಮ ಮಿ ಮು ಮೆ	ಇಲಿ	ಬೆಕ್ಕು	ರಾಕ್ಷಸ	ಅಂತ್ಯ	ಅಧಃ	ಉಗ್ರ	ಸ್ತ್ರೀ
೧೧	ಹುಬ್ಬಾ	ಮೊ ಟ ಟಿ ಟು	ಇಲಿ	ಬೆಕ್ಕು	ಮನುಷ್ಯ	ಮಧ್ಯ	ಅಧಃ	ಉಗ್ರ	ಸ್ತ್ರೀ
೧೨	ಉತ್ರಾ	ಟೆ ಟೊ ಪ ಪಿ	ವೃಷಭ	ಹುಲಿ	ಮನುಷ್ಯ	ಆದಿ	ಊರ್ಧ್ವ	ಸ್ಥಿರ	ಸ್ತ್ರೀ
೧೩	ಹಸ್ತ	ಪು ಷ ಣ ಢ	ಎಮ್ಮೆ	ಕುದುರೆ	ದೇವ	ಆದಿ	ತಿರ್ಯಕ್	ಕ್ಷಿಪ್ರ	ಪು
೧೪	ಚಿತ್ರಾ	ಪೆ ಪೊ ರಾ ರಿ	ವ್ಯಾಘ್ರ	ಗೋವು	ರಾಕ್ಷಸ	ಮಧ್ಯ	ತಿರ್ಯಕ್	ಮೃದು	ಸ್ತ್ರೀ
೧೫	ಸ್ವಾತಿ	ರು ರೇ ರೋ ಕ	ಎಮ್ಮೆ	ಅಶ್ವ	ದೇವ	ಅಂತ್ಯ	ತಿರ್ಯಕ್	ಚರ	ಸ್ತ್ರೀ
೧೬	ವಿಶಾಖಾ	ತಿ ತು ತೆ ತೊ	ಹುಲಿ	ದನ	ರಾಕ್ಷಸ	ಅಂತ್ಯ	ಅಧಃ	ತೀಕ್ಷ್ಣ	ಸ್ತ್ರೀ
೧೭	ಅನುರಾಧಾ	ನಾ ನಿ ನು ನೆ	ಜಿಂಕೆ	ನಾಯಿ	ದೇವ	ಮಧ್ಯ	ತಿರ್ಯಕ್	ಮೃದು	ಪು
೧೮	ಜ್ಯೇಷ್ಠಾ	ನೊ ಯಾ ಯಿ ಯು	ಜಿಂಕೆ	ನಾಯಿ	ರಾಕ್ಷಸ	ಆದಿ	ತಿರ್ಯಕ್	ತೀಕ್ಷ್ಣ	ಸ್ತ್ರೀ
೧೯	ಮೂಲಾ	ಯೆ ಯೊ ಬ ಭಿ	ನಾಯಿ	ಜಿಂಕೆ	ರಾಕ್ಷಸ	ಆದಿ	ಅಧಃ	ತೀಕ್ಷ್ಣ	ಸ್ತ್ರೀ
೨೦	ಪೂ. ಷಾ	ಬು ಧ ಫ ಢ	ಮಂಗ	ಆಡು	ಮನುಷ್ಯ	ಮಧ್ಯ	ಅಧಃ	ಉಗ್ರ	ಸ್ತ್ರೀ
೨೧	ಉ. ಷಾ	ಬೇ ಬೊ ಜಾ ಜಿ	ಮುಂಗ್ಲಿ	ಸರ್ಪ	ಮನುಷ್ಯ	ಅಂತ್ಯ	ಊರ್ಧ್ವ	ಸ್ಥಿರ	ಸ್ತ್ರೀ
೨೨	ಶ್ರವಣ	ಶಿ ಶು ಶೆ ಶೊ	ಕಪಿ	ಆಡು	ದೇವ	ಅಂತ್ಯ	ಊರ್ಧ್ವ	ಚರ	ಪು
೨೩	ಧನಿಷ್ಠಾ	ಗಾ ಗಿ ಗೂ ಗೆ	ಸಿಂಹ	ಆನೆ	ರಾಕ್ಷಸ	ಮಧ್ಯ	ಊರ್ಧ್ವ	ಚರ	ಸ್ತ್ರೀ
೨೪	ಶತಭಿಷ	ಗೋ ಸಾ ಸಿ ಸು	ಕುದುರೆ	ಎಮ್ಮೆ	ರಾಕ್ಷಸ	ಆದಿ	ಊರ್ಧ್ವ	ಚರ	ನ
೨೫	ಪೂ. ಭದಾ.	ಸೆ ಸೊ ದ ದಿ	ಸಿಂಹ	ಆನೆ	ಮನುಷ್ಯ	ಆದಿ	ಅಧಃ	ಉಗ್ರ	ಪು
೨೬	ಉ. ಭದ್ರಾ	ದು ಜ ಞ ಥ	ದನ	ಹುಲಿ	ಮನುಷ್ಯ	ಮಧ್ಯ	ಊರ್ಧ್ವ	ಸ್ಥಿರ	ಪು
೨೭	ರೇವತಿ	ದೆ ದೊ ಚ ಚಿ	ಆನೆ	ಸಿಂಹ	ದೇವ	ಅಂತ್ಯ	ತಿರ್ಯಕ್	ಮೃದು	ಸ್ತ್ರೀ

ಟಿ.— ನಾಮನಕ್ಷತ್ರಗಳನ್ನು ತೆಗೆಯುವ ರೀತಿ. ನಾರಾಯಣನೆಂಬವನ ಹೆಸರಿನಮೇಲಿಂದ ನಕ್ಷತ್ರವನ್ನು ತೆಗೆಯಬೇಕಾದರೆ ಆ ಮೊದಲಿನದಾದ ನಾ. ಅಕ್ಷರವು "ನಾ ನಿ ನೂ ನೆ" ಅನುರಾಧಾ ಈ ಕೋಷ್ಟಕದಲ್ಲಿ ಇರುವದರಿಂದ ಆತನ ನಾಮ ನಕ್ಷತ್ರವು ಅನುರಾಧೆಯಾಯಿತು. ಮೊದಲನೇ ಅಕ್ಷರವಾದುದರಿಂದ ಮೊದಲನೇ ಪಾದವಾಯಿತು. ಹೀಗೆಯೇ ಪ್ರತಿಯೊಂದು ಹೆಸರಿನ ಮೊದಲಿನ ಅಕ್ಷರದಮೇಲಿಂದ ಆಯಾಯ ನಕ್ಷತ್ರವನ್ನು ಕಂಡುಕೊಳ್ಳುವದು.

ಕೋಷ್ಟಕ ನಂ. ೬.

ಜನ್ಮಕಾಲದ ನಕ್ಷತ್ರಗಳ ಮೇಲೆ ಬರತಕ್ಕ ಗ್ರಹದಶಾ ಮತ್ತು ವರ್ಷದ ಸಂಖ್ಯೆಗಳು.				
ನಕ್ಷತ್ರಗಳು			ಗ್ರಹಗಳು	ದಶಾವರ್ಷ ಸಂಖ್ಯಾ.
ಅಶ್ವಿನಿ	ಮಘ	ಮೂಲ	ಕೇತು	೭
ಭರಣಿ	ಹುಬ್ಬಾ	ಪೂ. ಷಾ	ಶುಕ್ರ	೨೦
ಕೃತ್ತಿಕೆ	ಉತ್ರಾ	ಉ. ಷಾ.	ಸೂರ್ಯ	೬
ರೋಹಿಣಿ	ಹಸ್ತ	ಶ್ರವಣ	ಚಂದ್ರ	೧೦
ಮೃಗಶಿರೆ	ಚಿತ್ರಾ	ಧನಿಷ್ಠಾ	ಕುಜ	೭
ಆರ್ದ್ರೆ	ಸ್ವಾತಿ	ಶತಭಿಷ	ರಾಹು	೧೮
ಪುನರ್ವಸು	ವಿಶಾಖಾ	ಪೂ. ಭಾ.	ಗುರು	೧೬
ಪುಷ್ಯ	ಅನುರಾಧಾ	ಉ. ಭಾ.	ಶನಿ	೧೯
ಆಶ್ಲೇಷಾ	ಜ್ಯೇಷ್ಠ	ರೇವತಿ	ಬುಧ	೧೭

ಟಿ.— ಮೂರು ಮೂರು ನಕ್ಷತ್ರಗಳಿಗೆ ಒಂದೊಂದು ಗ್ರಹದಶೆಯು ಬರುವದು. ಮೇಲಿನ ಕೋಷ್ಟಕದಿಂದ ಯಾವ ನಕ್ಷತ್ರವು ಜನನಕಾಲದಲ್ಲಿದ್ದರೆ ಯಾವಗ್ರಹ ದಶೆಯಾಗುವದೆಂಬದನ್ನು ಸ್ಪಷ್ಟವಾಗಿ ತಿಳಿಯುವಂತಿದೆ. ಹೇಗಂದರೆ— ಅಶ್ವಿನಿ, ಮಘೆ, ಮೂಲ ಈ ಮೂರು ನಕ್ಷತ್ರಗಳು ಸಮರೇಖೆಯ ಕೋಷ್ಟಕದಲ್ಲಿದ್ದು ಇವುಗಳಮುಂದೆ ಕೇತುಗ್ರಹವಿರುವದು. ಕಾರಣ ಕೇತುವು ಈ ಮೂರು ನಕ್ಷತ್ರಗಳಿಗೆ ಜನ್ಮಾದಿ ದಶಾಕಾರಕನಾಗುವನು. ಅಂದರೆ ಜನನಕಾಲಕ್ಕೆ ಅಶ್ವಿನಿಯಾಗಲೀ, ಮಘೆಯಾಗಲೀ, ಮೂಲವಾಗಲೀ ಆಗಿದ್ದರೆ ಜನ್ಮಾದಿ ದಶೆಯು ಕೇತುವಿನದಾಗುವದು. ಆ ಕೇತುವಿಗೆ ದಶಾವರ್ಷ ಸಂಖ್ಯೆಯು ೭. ಹೀಗೆಯೇ ಆಯಾಯ ನಕ್ಷತ್ರಗಳ ತುದಿಯಲ್ಲಿ ಕೊಟ್ಟ ಗ್ರಹದಶೆಯನ್ನೂ ವರ್ಷ ಸಂಖ್ಯೆಯನ್ನೂ ತಿಳುಕೊಳ್ಳುವದು. ದಶಾ ಬರತಕ್ಕ ಕ್ರಮವೂ ಸಹ ಮೇಲೆ ಬರೆದಂತೆಯೇ ಸರಿ. ಜನ್ಮಕಾಲೀನ ನಕ್ಷತ್ರವು ಪುನರ್ವಸುವೆಂದು ತಿಳಿಯಿರಿ. ಅದಕ್ಕೆ ಗು

ರುದಶೆಯು ಜನ್ಮಾದಿ ದಶೆಯಾಗುವದು. (ಮೇಲಿನ ಕೋಷ್ಟಕವನ್ನು ನೋಡಿರಿ) ಅದರಿಂದ ಮುಂದೆ ಇರುವ ಶನಿ, ನಂತರ ಬುಧ, ಆ ಮೇಲೆ ಕೇತು, ಶುಕ್ರ, ಸೂರ್ಯ, ಚಂದ್ರ, ಕುಜ, ರಾಹು, ಹೀಗೆಯೇ ಗ್ರಹಗಳ ಕ್ರಮವು ಇರುವಂತೆ ಭುಕ್ತಿಗೂ ತಿಳಿಯುವದು.

ಕೋಷ್ಟಕ ನಂ. ೭.

ಯೋಗಗಳು ೨೭. ಕರಣಗಳು ೧೧.				
ಯೋಗಗಳು.			ಕರಣಗಳು.	
ವಿಷ್ಕಂಭ ಪ್ರೀತಿ ಆಯುಷ್ಮಾನ ಸೌಭಾಗ್ಯ ಶೋಭನ ಅತಿಗಂಡ ಸುಕರ್ಮಾ ಧೃತಿ ಶೂಲ	ಗಂಡ ವೃದ್ಧಿ ಧೃವ ವ್ಯಾಘಾತ ಹರ್ಷಣ ವಜ್ರ ಸಿದ್ಧಿ ವ್ಯತೀಪಾತ ವರೀಯಾನ್	ಪರಿಘ ಶಿವ ಸಿದ್ಧ ಸಾಧ್ಯ ಶುಭ ಶುಕ್ಲ ಬ್ರಹ್ಮ ಐಂದ್ರ ವೈಧೃತಿ	ಬವ (ಚರ) ಬಾಲವ । ಚ ಕೌಲವ । ಚ ತೈತಿಲ । ಚ ಗರ । ಚರ ವಣಿಜ । ಚ	ವಿಷ್ಟಿ । ಚ ಶಕುನಿ । ಸ್ಥಿರ ಚತುಷ್ಪದ । ಸ್ಥಿ ನಾಗ । ಸ್ಥಿ ಕಿಂಸ್ತುಘ್ನ । ಸ್ಥಿ

ಕೋಷ್ಟಕ ನಂ. ೮.

ಮೀನ ಘ. ೪ ವಿ. ೮	ಮೇಷ ಘ. ೪ ವಿಘಟಿ ೮	ವೃಷಭ ಘ. ೪ ವಿ. ೩೫	ಮಿಥುನ ಘ. ೫ ವಿ. ೧೩
ಕುಂಭ ಘ. ೪ ವಿ. ೪೫	ಮೇಷಾದಿರಾಶಿಗಳು ೧೨ ಅವುಗಳ ಘಟಿ–ವಿಘಟಿಗಳ ಪ್ರಮಾಣಗಳು.		ಕರ್ಕಟಕ ಘ. ೫ ವಿ. ೨೩
ಮಕರ ಘ. ೫ ವಿ. ೧೩			ಸಿಂಹ ಘ. ೫ ವಿ. ೨೩
ಧನು ಘ. ೫ ವಿ. ೩೩	ವೃಶ್ಚಿಕ ಘ. ೫ ವಿ. ೨೩	ತುಲಾ ಘ. ೫ ವಿ. ೮	ಕನ್ಯಾ ಘ. ೫ ವಿ. ೮

ಟಿ.— ಒಂದು ದಿನಕ್ಕೆ ಸೂರ್ಯೋದಯಾದಿ ಪುನಃ ಸೂರ್ಯೋದ

ಯವಾಗುವವರೆಗೆ ಮೇಲೆ ಬರೆದ ೧೨ ರಾಶಿಗಳು ಅಷ್ಟಷ್ಟು ಘಟ-ವಿಘಟಿಗಳಿಂದ ಮೂಡಿ ಮುಳುಗುವವು. ಅಂತು ೧೨ ರಾಶಿಗಳ ಘಟಿಗಳನ್ನೊಂದುಗೂಡಿಸಿದರೆ (೧) ದಿವಸವಾಗುವದು. ಆಯಾಯ ತಿಂಗಳಲ್ಲಿ ಮೊದಲು ಆಯಾಯ ರಾಶಿಗಳು ಉದಯಿಸುವವು. ಮುಂದೆ ಕ್ರಮೇಣ ಆ ಮೊದಲಿನ ರಾಶಿಯು ಬರುವದರೊಳಗೆ ಒಂದು ದಿನವು ಕಳೆಯುವದು. ಈಗ ಮೇಷ ತಿಂಗಳೆಂದು ತಿಳಿದುಕೊಳ್ಳಿರಿ. ಸೂರ್ಯೋದಯದಲ್ಲಿ ಮೇಷರಾಶಿಯಿರುವದು. ಮುಂದೆ ವೃಷಭವು. ಆ ಮೇಲೆ ಮಿಥುನವು. ಹೀಗೆ ಮೀನಾಂತವಾಗುವಲ್ಲಿ ಒಂದು ದಿವಸವು ಕಳೆಯುವದು. ಈ ರಾಶಿಗಳ ಘಟ-ವಿಘಟಿಗಳನ್ನು ತಿಳಿದುಕೊಳ್ಳುವದಕ್ಕಾಗಿ ಅಕ್ಷರಸಂಖ್ಯಾ ಶ್ಲೋಕವು ಕೊಡಲ್ಪಟ್ಟಿದೆ. ಅಕ್ಷರಸಂಖ್ಯೆಯನ್ನು ತಿಳಿದುಕೊಳ್ಳುವದು ಹೇಗೆಂದರೆ- " ಕ " ಈ ಅಕ್ಷರಕ್ಕೆ ೧ ಎಂದು ತಿಳಿಯಬೇಕು. " ಖ " ಈ ಅಕ್ಷರವು ೨ ಸಂಖ್ಯೆಯನ್ನು ಸೂಚಿಸುತ್ತದೆ. ಇದರಂತೆ ಕೆಳಗೆ ಬರೆದ ಕೋಷ್ಟಕದಿಂದ ಅಕ್ಷರ ಸಂಖ್ಯೆಯನ್ನು ತಿಳಿಯುವದು.

ಕೋಷ್ಟಕ ನಂ. ೯.

ಕ ೧	ಚ ೬	ಟ ೧	ತ ೬	ಪ ೧	ಯ ೧
ಖ ೨	ಛ ೭	ಠ ೨	ಥ ೭	ಫ ೨	ರ ೨
ಗ ೩	ಜ ೮	ಡ ೩	ದ ೮	ಬ ೩	ಲ ೩
ಘ ೪	ಝ ೯	ಢ ೪	ಧ ೯	ಭ ೪	ವ ೪
ಙ ೫	ಞ (೦)	ಣ ೫	ನ (೦)	ಮ ೫	ಶ ೫
					ಷ ೬
					ಸ ೭
					ಹ ೮

ಒತ್ತಕ್ಷರ ಬಂದರೆ ಅಂತ್ಯಾಕ್ಷರವನ್ನೇ ಲಕ್ಷ್ಯಕ್ಕೆ ತಗೊಳ್ಳುವದು. " ಕ್ಷ " ಎಂಬುದೊಂದಕ್ಷರವನ್ನು ತಗೊಳ್ಳಿರಿ. ಇಲ್ಲಿ ಆದಿ ಅಕ್ಷರವಾದ " ಕ " ಕಾರವನ್ನು ಬಿಟ್ಟು " ಷ " ಕಾರವನ್ನೇ ತಗೊಳ್ಳಬೇಕು.

ಶ್ಲೋಕ.

ಜನತ್ವ ಶೀಲತ್ವ ಬಕೇಶಿ ಲಾಗಮಂ
ಗಿರೀಶ ದಾನೇಶ ದಿನೇಶ ಗೋತ್ರಿಣಃ
ಲೋಲೇಶ ಲೋಕೇಶ ಶಿಲತ್ವ ದಾನವಂ
ಮೇಷಾದಿಭಾನಾಂ ಘಟಿಕಾ ಪ್ರಮಾಣಂ ॥

ಮೂರು ಮೂರು ಅಕ್ಷರಗಳಂತೆ ಶ್ಲೋಕದ ಮೂರು ಚರಣದ ತುದಿ

ವರೆಗೆ ೧೨ ರಾಶಿಗಳ ಘಟ–ವಿಘಟಿಗಳ ಸಂಖ್ಯೆಯನ್ನು ತಿಳಕೊಳ್ಳಬೇಕು. ಮೇಷಕ್ಕೆ " ಜನತ್ವ " ವೃಷಭಕ್ಕೆ " ಶೀಲತ್ವ " ಹೀಗೆಯೇ ೧೨ ವಾಕ್ಯಗಳನ್ನು ೧೨ ರಾಶಿಗಳಿಗೆ ತಿಳಿದುಕೊಳ್ಳುವದು. ಈ ವಾಕ್ಯಗಳಲ್ಲಿ ಅಕ್ಷರಗಳನ್ನು ಬಲದಿಂದ ಎಡಕ್ಕೆ ತಿರುಗಿಸಿ ಲೆಖ್ಖ ಮಾಡುವದು. ಹೇಗೆಂದರೆ- ಮೇಷದ ವಾಕ್ಯ (ಜನತ್ವ) ದಲ್ಲಿ " ಜ " ಅಂದರೆ ೮ " ನ " ಅಂದರೆ (೦) " ತ್ವ " ಅಂದರೆ ೪ ಈ ಜನತ್ವವನ್ನು ಬಲದಿಂದೆಡಕ್ಕಿಡುತ್ತಾ ಬಂದರೆ ತ್ವ–೪, ನ ೦, ಜ–೮ ಇದರಲ್ಲಿ ಎಡದ ಒಂದು ಅಂಕೆಯು ಘಟಿಯು. ಬಲದ ಎರಡು ಅಂಕೆಗಳು ವಿಘಟಿಗಳು. ಅಂತು ೪ ಘಟಿ . ೮ ವಿಘಟಿಗಳು, ಮೇಷಕ್ಕೆ. ಹೀಗೆಯೇ ಪ್ರತಿಯೊಂದು ರಾಶಿಗೂ ತಿಳಿದುಕೊಳ್ಳಬೇಕು.

ಪ್ರತಿಯೊಂದು ತಿಂಗಳಲ್ಲಿ ಬರುವ ಆಯಾಯ ಮೊದಲಿನ ರಾಶಿಯಲ್ಲಿ ಕೆಲವಿಷ್ಟು ಘಟಿಗಳು ಸೂರ್ಯೋದಯಕ್ಕಿಂತ ಮೊದಲೇ ಸಂದುಹೋಗುವವು. ಹೀಗೆ ಸಲುತ್ತಾ ಸಲುತ್ತಾ ಇನ್ನೊಂದು ತಿಂಗಳಲ್ಲಿ ಪ್ರಾರಂಭದಲ್ಲಿ ಸೂರ್ಯೋದಯಕ್ಕೆ ಬೇರೆ ರಾಶಿಯು ಬರುವದು. ಆಯಾಯ ತಿಂಗಳಲ್ಲಿ ಆಯಾಯ ರಾಶಿ ವಿಘಟಿಗಳು ಸಲುವವು. ಯಾವ್ಯಾವ ರಾಶಿಗಳಿಗೆ ಸಲುವ ವಿಘಟಿಗಳೆಷ್ಟು ?

ಅಕ್ಷರ ಸಂಖ್ಯಾ ಶ್ಲೋಕ ॥

ಧಾನಂ ಧೇನು-ನಯಂ-ಕೂಟಂ-ಕೂಟಂ-ಜ್ಞೇಯಂ-ನಯಃಪಟುಃ
ಪುಷ್ಟಿರ್ನಯ ಧನುಜ್ಞಾ‌ರ್ನಂ ಮೇಷಾದಿ ದಿನಲಿಪ್ತಿಕಾಃ ।

ದಿನ ಒಂದರ ರಾಶಿಗಳಿಗೆ ಸಲುವ ವಿಘಟಿಗಳು ಮೇಷಕ್ಕೆ 'ಧಾನಂ' (೯) ವೃಷಭಕ್ಕೆ " ಧೇನು " (೯) ಮಿಥುನಕ್ಕೆ " ನಯಂ " (೧೦) ಕರ್ಕಕ್ಕೆ " ಕೂಟಂ " (೧೧) ಸಿಂಹ " ಕೂಟಂ " (೧೧) ಕನ್ಯಾಕ್ಕೆ " ಜ್ಞೇಯಂ " (೧೦) ತುಲಾಕ್ಕೆ " ನಯಃ " (೧೦) ವೃಶ್ಚಿಕಕ್ಕೆ " ಪಟುಃ " (೧೧) ಧನುಸ್ಸಿಗೆ " ಪುಷ್ಟಿಃ " (೧೧) ಮಕರಕ್ಕೆ " ನಯ " (೧೦) ಕುಂಭಕ್ಕೆ " ಧನುಃ " (೯) ಮೀನಕ್ಕೆ " ಜ್ಞಾನಂ " (೮) ಇದರಂತೆ ಆಯಾಯ ತಿಂಗಳಲ್ಲಿ ಆಯಾಯ ರಾಶಿ ವಿಘಟಿಗಳು ಸೂರ್ಯೋದಯಾತ್ಪೂರ್ವದಲ್ಲೇ ಸಲುವವು. ಬೇಕಾದ ದಿನದಲ್ಲಿ ಎಷ್ಟು ಘಟಿಯು ಸಂದಿದೆಯೆಂದು ನೋಡಿಕೊಳ್ಳುವದು. ಜನನ ಕಾಲವು ಮಿಥುನ ಮಾಸದ ೨೧ ನೇ ದಿನದಲ್ಲಾಗಿದೆಯೆಂದು ತಿಳಿದುಕೊಳ್ಳಿರಿ. ಮಿಥುನರಾಶಿಗೆ ದಿನಒಂದರ ಸಲುವ ವಿಘಟಿ (ಮೇಲಿನ ಶ್ಲೋಕದಂತೆ) " ನಯಂ " ೧೦ ವಿಘಟಿಗಳು. ಮಿಥುನ ಮಾಸದ ೨೧ ನೇ ದಿನದ ಲಗ್ನವು ನಮಗೆ ಬೇಕಾಗಿದೆ. ಕಾರಣ ಕಳೆದ ೨೦ ದಿನಗಳಲ್ಲಿ ದಿನಒಂದರ ೧೦ ವಿಘಟಿಯಂತೆ ಎಣಿಸಲಾಗಿ ೨೦×೧೦=೨೦೦ ವಿಘಟಿಗಳು ಸಂದಹಾಗಾಯಿತು. ಆ ೨೦೦ ವಿಘಟಿಗಳನ್ನು ಘಟಿ ಮಾಡಲಾಗಿ

ಮೂರು ಘಟಿ ಇಪ್ಪತ್ತು ವಿಘಟಗಳಾದವು. ಇವು ಆ ೨೧ ನೇ

೬೦) ೨೦೦ (೩
೧೮೦
———
೨೦

ದಿನದ ಸೂರ್ಯೋದಯದ ಹಿಂದೆ ಸಂದಹಾಗಾಯಿತು. ಆದ್ಯಂತ ಮಿಥುನ ಘಟಿ ೫. ವಿಘಟ ೧೩ (ಕೋ. ನಂ. ೯ ನೋಡಿರಿ) ಇದರಲ್ಲಿ ಆ ಸಂದ ಘಟಿ ೩ ವಿಘಟ ೨೦ ನ್ನು ವಜಾ ಮಾಡಲಾಗಿ

೫—೧೩
೩—೨೦
———
(೧—೫೩)

೧ ಘಟಿ ೫೩ ವಿಘಟಗಳು ಮುಂದೆ ಮಿಥುನ ರಾಶಿಯು ಶಿಲ್ಕು ಉಳಿದಹಾಗಾಯಿತು. ಅಲ್ಲಿಂದ ಕರ್ಕಟಾದಿ ರಾಶಿಗಳನ್ನು ಇಷ್ಟಕಾಲದವರೆಗೆ ಕೂಡಿಸಿಕೊಂಡು ತಾತ್ಕಾಲಿಕ ಲಗ್ನವನ್ನು ತಿಳಕೊಳ್ಳಬೇಕು.

ಕೋಷ್ಟಕ ನಂ. ೧೦.

ನಕ್ಷತ್ರ-ಪಾದಗಳಿಂದ ರಾಶಿಗಳನ್ನು ಭಾಗಿಸುವದು.

ನಕ್ಷತ್ರ	ಪಾದ	ನಕ್ಷತ್ರ	ಪಾದ	ನಕ್ಷತ್ರ	ಪಾದ	ರಾಶಿ
ಅಶ್ವಿನಿ	೪	ಭರಣಿ	೪	ಕೃತ್ತಿಕಾ	೧	ಮೇಷ
ಕೃತ್ತಿಕಾ	೩	ರೋಹಿಣಿ	೪	ವೃಗಶಿರಾ	೨	ವೃಷಭ
ವೃಗಶಿರಾ	೨	ಆದ್ರಾ್ರ	೪	ಪುನರ್ವಸು	೩	ಮಿಥುನ
ಪುನರ್ವಸು	೧	ಪುಷ್ಯ	೪	ಆಶ್ಲೇಷಾ	೪	ಕರ್ಕಟಕ
ಮಘಾ	೪	ಹುಬ್ಬಾ	೪	ಉತ್ರಾ	೧	ಸಿಂಹ
ಉತ್ರಾ	೩	ಹಸ್ತ	೪	ಚಿತ್ರಾ	೨	ಕನ್ಯಾ
ಚಿತ್ರಾ	೨	ಸ್ವಾತಿ	೪	ವಿಶಾಖಾ	೩	ತುಲಾ
ವಿಶಾಖಾ	೧	ಅನುರಾಧಾ	೪	ಜ್ಯೇಷ್ಠಾ	೪	ವೃಶ್ಚಿಕ
ಮೂಲಾ	೪	ಪೂ. ಷಾ	೪	ಉ. ಷಾ	೧	ಧನು
ಉ. ಷಾ	೩	ಶ್ರವಣ	೪	ಧನಿಷ್ಠಾ	೨	ಮಕರ
ಧನಿಷ್ಠಾ	೨	ಶತಭಿಷ	೪	ಪೂ. ಭ	೩	ಕುಂಭ
ಪೂ. ಭ	೧	ಉತ್ರಾ ಭ	೪	ರೇವತಿ	೪	ಮೀನ

೮.— ಒಂದೊಂದು ನಕ್ಷತ್ರಕ್ಕೆ ನಾಲ್ನಾಲ್ಕು ಪಾದಗಳು. ಅಂತು ೨೭ ನಕ್ಷತ್ರಗಳಿಗೆ ೧೦೮ ಪಾದಗಳಾಗುವವು. ಅಶ್ವಿನ್ಯಾದಿ ಕ್ರಮೇಣ ೯-೯ ಪಾದಗಳಿಗೆ ಮೇಷಾದಿ ಒಂದೊಂದು ರಾಶಿಗಳೆಂದು ವಿಭಾಗಿಸಿಸಲ್ಪಟ್ಟ್ಬು ೧೨ ರಾಶಿಗಳಿಗೆ ೧೨ × ೯ = ೧೦೮ ಪಾದಗಳು ಮುಗಿಯುವವು. ಮೇಲೆ ಬರೆದ ಕೋಷ್ಟಕದಂತೆ ಅಶ್ವಿನಿ ೪ ಪಾದಗಳು, ಭರಣಿ ೪ ಪಾದಗಳು, ಕೃತ್ತಿಕೆ ೧ ಪಾದ ಅಂತೂ ೯ ಪಾದಗಳಿಗೆ ಒಂದು ಮೇಷರಾಶಿಯಾಯಿತು. ಪುನಃ ಉಳಿದಿರುವ ಕೃತ್ತಿಕೆಯ ೩ ಪಾದಗಳು, ರೋಹಿಣಿಯ ೪ ಪಾದಗಳು, ವೃಗಶಿರೆಯ ೨ ಪಾದಗಳು ಅಂತೂ ಈ ೯ ಪಾದಗಳಿಗೆ ವೃಷಭರಾಶಿಯಾಯಿತು. ಹೀಗೆಯೇ ೯ ಪಾದಗಳಿಂದ ಆಳಿಯುತ್ತಾ ಹೋದರೆ ಹನ್ನೆರಡು ರಾಶಿಗಳಿಗೆ ೧೦೮ ಪಾದಗಳು ಸಲುವವು.

ಗ್ರಹಗಳು ಯಾವ ನಕ್ಷತ್ರದ ಎಷ್ಟನೇ ಪಾದದಲ್ಲಿರುತ್ತವೆಂಬದನ್ನು ಪಂಚಾಂಗದಲ್ಲಿ ನೋಡಿಕೊಂಡು ಆ ನಕ್ಷತ್ರದ ಆ ಪಾದವು ಯಾವ ರಾಶಿಯಾಗುತ್ತದೆಂಬದನ್ನು ನೋಡಿ, ಆ ರಾಶಿಯಲ್ಲಿ ಆ ಗ್ರಹರನ್ನಿಟ್ಟು ಅಶ್ವಿನ್ಯಾದಿಯಾಗಿ ಪಾದಗಳನ್ನು ಒಟ್ಟುಗೂಡಿಸಿ ೧೨ ರಿಂದ ಭಾಗಿಸಿ ಉಳಿದ ಶೇಷ ಪಾದಗಳ ಸಂಖ್ಯೆಯನ್ನು ಅಂಶಕಗಳೆಂದು ತಿಳಿದು ಆ ಗ್ರಹದ ಮುಂದೆ ಹಚ್ಚಬೇಕು. ಅಂದರೆ ಕುಂಡಲಿಯಲ್ಲಿ ಗ್ರಹದ ಅಂಶಕವನ್ನು ಹಚ್ಚಿದಂತಾಗುವದು

" ವೃಗಶಿರಾ ೩ ಶುಕ್ರಃ " ಎಂದು ಪಂಚಾಂಗದಲ್ಲಿದೆಯೆಂದು ತಿಳಿದುಕೊಳ್ಳಿರಿ. ಅಂದರೆ ವೃಗಶಿರದ ೩ ನೇ ಪಾದದಲ್ಲಿ ಶುಕ್ರನಿರುವನೆಂದರ್ಥವಾಯಿತು. ವೃಗಶಿರೆಯ ೨ ಪಾದಗಳಿಗೆ ವೃಷಭರಾಶಿಯು ಮುಗಿಯುತ್ತದಷ್ಟೇ? (ಮೇಲಿನ ಕೋಷ್ಟಕವನ್ನು ನೋಡಿರಿ.) ಮೂರನೇ ಪಾದವು ಮಿಥುನ ರಾಶಿಯಲ್ಲಾಗುವ ಕಾರಣ ಶುಕ್ರನು ಮಿಥುನದಲ್ಲಿದ್ದಂತಾಯಿತು. ಆದ್ಯಂತ ಅಶ್ವಿನ್ಯಾದಿ ನಕ್ಷತ್ರಗಳ ಪಾದಗಳನ್ನು ಎಣಿಸಲಾಗಿ ಅಶ್ವಿನಿ ೪ ಭರಣಿ ೪ ಕೃತ್ತಿಕಾ ೪ ರೋಹಿಣಿ ೪ ವೃಗಶಿರಾ ೨ ಅಂತೂ ಪಾದಗಳನ್ನು ಬೇರೀಜು ಮಾಡಲಾಗಿ ೧೯ ಪಾದಗಳಾದವು. ೧೨ ರಿಂದ ಭಾಗಿಸಲಾಗಿ ೧೨) ೧೯ (೧

೧೨
———
೭

ಶೇಷವಾಯಿತು. ಕಾರಣ ಶುಕ್ರನಿಗೆ ಮಿಥುನ ರಾಶಿಯಲ್ಲಿ ೭ ಅಂಶಕವನ್ನು ಹಚ್ಚಬೇಕು. " ಹುಬ್ಬಾ ೪ ಶನಿಃ " ಎಂದು ಪಂಚಾಂಗಚಾರದಲ್ಲಿದ್ದರೆ ಮೇಲಿನ ಕೋಷ್ಟಕದ ಪ್ರಕಾರ ಹುಬ್ಬಾ ನಕ್ಷತ್ರವು (ಸಂಪೂರ್ಣವಾಗಿ) ಸಿಂಹದಲ್ಲಿ ಬರುವದರಿಂದ ಶನಿಯು ಸಿಂಹದಲ್ಲಿದ್ದಹಾಗಾಯಿತು. ಹುಬ್ಬಾ ನಕ್ಷತ್ರವು ೧೧ ನೇ ನಕ್ಷತ್ರವಾದುದರಿಂದ ಒಂದೊಂದು ನಕ್ಷತ್ರಕ್ಕೆ ನಾಲ್ನಾಲ್ಕು ಪಾದಗಳಂತೆ ೧೧ × ೪ = ೪೪ ಪಾದಗಳಾದವು.

ಆ ೪೪ ಪಾದಗಳನ್ನು ೧೨ ರಿಂದ ಭಾಗಿಸಲಾಗಿ ೧೨) ೪೪ (೩
೩೬
---
೮ ಶೇಷವಾಯಿತು.

ಅಂದರೆ ಸಿಂಹದಲ್ಲಿ ಶನಿಗೆ ೮ ಅಂಶಕವು ಬಿದ್ದಂತಾಯಿತು. ಹೀಗೆಯೇ ಕೋಷ್ಟಕದ ಪ್ರಕಾರ ಗ್ರಹಗಳಿಗೆ ರಾಶಿಸ್ಥಾನಗಳನ್ನು ತಿಳಕೊಂಡು ಅಂಶಕಗಳನ್ನು ಹಚ್ಚಬೇಕು.

ಯಾವ್ಯಾವ ನಕ್ಷತ್ರಗಳ ಎಷ್ಟೆಷ್ಟನೇ ಪಾದಗಳಿದ್ದರೆ ಗ್ರಹಗಳಿಗೆ ಎಷ್ಟೆಷ್ಟಂಶಕವು ಯಾವ್ಯಾವ ರಾಶಿಯಲ್ಲಿ ಬೀಳುತ್ತದೆಂಬದನ್ನು ಮುಂದಿನ ಕೋಷ್ಟಕ ನಂ. ೧೧ ರಿಂದ ತಿಳಿದುಕೊಳ್ಳುವಂತಿದೆ

ಕೋಷ್ಟಕ ನಂ. ೧೧.

ನಂ.	ನಕ್ಷತ್ರಗಳು.	ಪಾದಗಳು.	ರಾಶಿಗಳು.	ಅಂಶಕಗಳು.
1	ಅಶ್ವಿನಿಯ.	೧	ಮೇಷದಲ್ಲಿ	೧
	ಡಿ	೨	ಡಿ	೨
	ಡಿ	೩	ಡಿ	೩
	ಡಿ	೪	ಡಿ	೪
2	ಭರಣಿ	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
3	ಕೃತ್ತಿಕಾ	೧	ಡಿ	೯
	ಡಿ	೨	ವೃಷಭದಲ್ಲಿ.	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
4	ರೋಹಿಣಿ	೧	ಡಿ	೧
	ಡಿ	೨	ಡಿ	೨
	ಡಿ	೩	ಡಿ	೩

ನಂ.	ನಕ್ಷತ್ರಗಳು.	ಪಾದಗಳು.	ರಾಶಿಗಳು.	ಅಂಶಕಗಳು.
	ರೋಹಿಣಿ.	೪	ವೃಷಭದಲ್ಲಿ.	೪
5	ಮೃಗಶಿರಾ.	೧	ಡಿ	೫
	ಡಿ	೨	ಡಿ	೬
	ಡಿ	೩	ಮಿಥುನದಲ್ಲಿ.	೭
	ಡಿ	೪	ಡಿ	೮
6	ಆರ್ದ್ರಾ	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
7	ಪುನರ್ವಸು	೧	ಡಿ	೧
	ಡಿ	೨	ಡಿ	೨
	ಡಿ	೩	ಡಿ	೩
	ಡಿ	೪	ಕರ್ಕಟಕದಲ್ಲಿ.	೪
8	ಪುಷ್ಯ	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
9	ಆಶ್ಲೇಷ	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
10	ಮಘಾ	೧	ಸಿಂಹದಲ್ಲಿ	೧
	ಡಿ	೨	ಡಿ	೨

ನಂ.	ನಕ್ಷತ್ರಗಳು.	ಪಾದಗಳು.	ರಾಶಿಗಳು.	ಅಂಶಕಗಳು.
	ಮಘಾ.	೩	ಸಿಂಹದಲ್ಲಿ.	೩
	ಡಿ	೪	ಡಿ	೪
11	ಹುಬ್ಬಾ	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
12	ಉತ್ರಾ	೧	ಡಿ	೯
	ಡಿ	೨	ಕನ್ಯಾದಲ್ಲಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
13	ಹಸ್ತ	೧	ಡಿ	೧
	ಡಿ	೨	ಡಿ	೨
	ಡಿ	೩	ಡಿ	೩
	ಡಿ	೪	ಡಿ	೪
14	ಚಿತ್ರಾ	೧	ಡಿ	೫
	ಡಿ	೨	ಡಿ	೬
	ಡಿ	೩	ತುಲೆಯಲ್ಲಿ	೭
	ಡಿ	೪	ಡಿ	೮
15	ಸ್ವಾತಿ	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
16	ವಿಶಾಖಾ	೧	ಡಿ	೧
	ಡಿ	೨	ಡಿ	೨

ನಂ	ನಕ್ಷತ್ರಗಳು.	ಪಾದಗಳು.	ರಾಶಿಗಳು.	ಅಂಶಕಗಳು.
	ವಿಶಾಖಾ.	೩	ತುಲೆಯಲ್ಲಿ.	೩
	ಡಿ	೪	ವೃಶ್ಚಿಕದಲ್ಲಿ	೪
17	ಅನುರಾಧಾ.	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
18	ಜ್ಯೇಷ್ಠಾ.	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
19	ಮೂಲ.	೧	ಧನುವಿನಲ್ಲಿ	೧
	ಡಿ	೨	ಡಿ	೨
	ಡಿ	೩	ಡಿ	೩
	ಡಿ	೪	ಡಿ	೪
20	ಪೂ. ಷಾ.	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
21	ಉತ್ರಾಷಾಢಾ.	೧	ಡಿ	೯
	ಡಿ	೨	ಮಕರದಲ್ಲಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
22	ಶ್ರವಣ.	೧	ಡಿ	೧

ನಂ.	ನಕ್ಷತ್ರಗಳು.	ಪಾದಗಳು.	ರಾಶಿಗಳು.	ಅಂಶಕಗಳು.
	ಶ್ರವಣ.	೨	ಮಕರದಲ್ಲಿ.	೨
	ಡಿ	೩	ಡಿ	೩
	ಡಿ	೪	ಡಿ	೪
23	ಧನಿಷ್ಠಾ.	೧	ಡಿ	೫
	ಡಿ	೨	ಡಿ	೬
	ಡಿ	೩	ಕುಂಭದಲ್ಲಿ	೭
	ಡಿ	೪	ಡಿ	೮
24	ಶತಭಿಷಿ.	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨
25	ಪೂ. ಭದ್ರಾ	೧	ಡಿ	೧
	ಡಿ	೨	ಡಿ	೨
	ಡಿ	೩	ಡಿ	೩
	ಡಿ	೪	ಮೀನದಲ್ಲಿ.	೪
26	ಉ. ಭದ್ರಾ.	೧	ಡಿ	೫
	ಡಿ	೨	ಡಿ	೬
	ಡಿ	೩	ಡಿ	೭
	ಡಿ	೪	ಡಿ	೮
27	ರೇವತಿ.	೧	ಡಿ	೯
	ಡಿ	೨	ಡಿ	೧೦
	ಡಿ	೩	ಡಿ	೧೧
	ಡಿ	೪	ಡಿ	೧೨

ಮೇಲೆ ಬರೆದ ಕೋಷ್ಟಕದಿಂದ ಗ್ರಹಗಳಿಗೆ ರಾಶಿಯಲ್ಲಿ ಅಂಶಕವನ್ನು ಹಚ್ಚುವ ಕ್ರಮವು ಎಷ್ಟು ಸುಲಭವಾಗಿದೆಯೆಂಬದನ್ನು ತಿಳಿದುಕೊಳ್ಳುವಂತಿದೆ.

ಕೋಷ್ಟಕ ನಂ. ೧೨.

(ವಿಂಶೋತ್ತರಿ) ಗ್ರಹದಶಾಭುಕ್ತಿ ವಿವರಣ

ಸೂ. ೬ ವ.	ಚಂ. ೧೦ ವ.	ಕು. ೭ ವ.	ರಾ. ೧೮ ವ	ಗು. ೧೬ ವ	ಶನಿ ೧೯ ವ.	ಬುಧ ೧೭ ವ	ಕೇ. ೭ ವ.	ಶುಕ್ರ ೨೦ ವ.	ದಶಗಳು
ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ತಿಂಗಳು-ದಿನ	ಭುಕ್ತಿ (ಅಂತರದಶಾ) ಗಳು.
ರ ।೩।೧೮	ಚ ।೧೦।೦	ಕು ।೪।೨೭	ರಾ ।೩೨।೧೨	ಗು ।೨೫।೧೮	ಶ ।೩೬।೩	ಬು ।೨೮।೨೭	ಕೇ ।೪।೨೭	ಶು ೪೦।೦	
ಚ ।೬।೦	ಕು ।೭।೦	ರಾ ।೧೨।೧೮	ಗು ।೨೮।೨೪	ಶು ।೩೦।೧೨	ಬು ।೩೨।೯	ಕೇ। ೧೧।೨೭	ಶು ।೧೪।೦	ರ ।೧೨।೦	
ಕು ।೪।೬	ರಾ ।೧೮।೦	ಗು। ೧೧.೬	ಶ ।೩೪।೬	ಬು ।೨೭।೬	ಕೇ ೧೩।೯	ಶು ।೩೪।೦	ರ ।೪।೬	ಚ ।೨೦।೦	
ರಾ ।೧೦।೨೪	ಗು ।೧೬।೦	ಶ ।೧೩।೯	ಬು। ೩೦.೧೮	ಕೇ ।೧೧।೬	ಶು ।೩೮।೦	ರ ।೧೦।೬	ಚ ।೭।೦	ಕು ।೧೪।೦	
ಗು ।೯।೧೮	ಶ ।೧೯।೦	ಬು ।೧೧।೨೭	ಕೇ ।೧೨।೧೮	ಶು ।೩೨।೦	ರ ।೧೧।೧೨	ಚ ।೧೭।೦	ಕು ।೪।೨೭	ರಾ ।೩೬।೦	
ಶ ।೧೧।೧೨	ಬು ।೧೭।೦	ಕೇ ।೪।೨೭	ಶು ।೩೬।೦	ರ ।೯।೧೮	ಚ ।೧೯।೦	ಕು ।೧೧।೨೭	ರಾ ।೧೨।೧೮	ಗು ।೩೨।೦	
ಬು ೧೦।೬	ಕೇ ।೭।೦	ಶು ।೧೪।೦	ರಾ ।೧೦।೨೪	ಚ ।೧೬।೦	ಕು ।೧೩।೯	ರಾ ।೩೦।೧೮	ಗು ।೧೧।೬	ಶ ।೩೮।೦	
ಕೇ ।೪।೬	ಶು ।೨೦।೦	ರ ।೪।೬	ಚ ।೧೮।೦	ಕು ।೧೧।೬	ರಾ ।೩೪।೬	ಗು ।೨೭।೬	ಶ ೧೩।೯	ಬು ।೩೪।೦	
ಶು ।೧೨।೦	ರ ।೬।೦	ಚ ।೭।೦	ಕು ।೧೨।೧೮	ರಾ ।೨೮।೨೪	ಗು ।೩೦।೧೨	ಶ ।೩೨।೯	ಬು ।೧೧।೨೭	ಕೇ ।೧೪ ೦	

ಕೋಷ್ಟಕ ನಂ. ೧೩.

ಗ್ರಹದಶಾಭುಕ್ತಿಗಳ ದೋಷಪರಿಹಾರಕಕ್ಕಾಗಿ ಆರಾಧ್ಯ ದೇವತಾ, ನೈವೇದ್ಯ ಮತ್ತು ದಾನಕೊಡತಕ್ಕ ಗೋ ವಸ್ತ್ರ ಮೊದಲಾದವುಗಳು.

ಗ್ರಹಗಳು.	ರವಿ.	ಚಂ.	ಕು.	ಬು.	ಗು.	ಶು.	ಶ.	ರಾ.	ಕೇ.
ದೇವತಾ	ಶಿವ	ದುರ್ಗಾ	ಸ್ಕಂದ	ವಿಷ್ಣು	ರುದ್ರ	ದುರ್ಗಾ	ತ್ರಿಮೂರ್ತಿ	ಸ್ಕಂದ	ಗಣಪತಿ
ಪುಷ್ಪ	ಕೆಂಪು	ಶುಭ್ರ	ಕೆಂಪು	ಕಪ್ಪು	ಹಳದಿ	ಶುಭ್ರ	ಕಪ್ಪು	ಕಪ್ಪು	ಕಪ್ಪು
ಧಾನ್ಯ	ಗೋದಿ	ಅಕ್ಕಿ	ತೊಗರಿ	ಹೆಸರು	ಕಡಲೆ	ಅವರೆ	ಎಳ್ಳು	ಉದ್ದು	ಹುರುಳಿ
ಪಶು	ಕಪಿಲ ಗೋ.	ಬಿಳಿ ಗೋ.	ಕೆಂಪುವೃಷ	ಕುದುರೆ	ಬಿಳಿಕುದುರೆ	ಕುದುರೆ	ಕಪ್ಪು ಗೋ	ಆಡು	ಆನೆ
ವಸ್ತ್ರ	ಕೆಂಪು	ಬಿಳಿದು	ರಕ್ತ	ಹಸರು	ಹಳದಿ	ಬಿಳಿದು	ಕಪ್ಪು	ಚಿತ್ರ	ಚಿತ್ರ
ರಸ	ಬೆಲ್ಲ	ತುಪ್ಪ	ಬೆಲ್ಲ	ತುಪ್ಪ	ಸಕ್ಕರೆ	ತುಪ್ಪ	ತೈಲ	ತೈಲ	ತೈಲ

ಜಾತಕ ಕುಂಡಲಿಯನ್ನು ತಯಾರಿಸುವ ರೀತಿಯು.

ಶ್ರೀ ಶಕ ೧೮೫೧ ನೇ ಶುಕ್ಲ ಸಂವತ್ಸರದ ವೈಶಾಖ ಶುದ್ಧ ೫ ಸೋಮವಾರ ದಿವಾ (ಹಗಲು ಸೂರ್ಯೋದಯಾದಿ) ಘಟಿ ೧೮ ವಿಘಟಿ ೧೫ಕ್ಕೆ ದೇವದತ್ತನೆಂಬುವನಿಗೆ ರಾಮದತ್ತನೆಂಬ ಪುತ್ರನು ಜನಿಸಿರುವನು. ಈ ಜನ್ಮಟಿಪ್ಪಣಿಯಿಂದ ಜಾತಕವನ್ನು ತಯಾರಿಸೋಣ.

ಮೊಟ್ಟಮೊದಲು ಮಂಗಲಾಚರಣ-ಶ್ಲೋಕಾದಿಗಳನ್ನು ಬರಕೊಂಡು ಆ ಹುಟ್ಟಿದ ದಿನದ ಪಂಚಾಂಗವನ್ನು ಬರೆದುಕೊಂಡು ಜನನ ಕಾಲದ ನಕ್ಷತ್ರದ ಗತ, ಏಷ್ಯ, ಪರಮ ಘಟಿಗಳನ್ನು ಬರೆದುಕೊಂಡು ನಂತರ ಜನ್ಮಾದಿ ದಶಾ ಏಷ್ಯ ವರ್ಷ, ಮಾಸ, ದಿವಸಗಳನ್ನು ಬರೆದು ನಂತರ ದ್ವಾದಶ ರಾಶಿ ಕುಂಡಲವನ್ನು ರಚಿಸಿ ಲಗ್ನಗ್ರಹಗಳ ಅಂಶಕಗಳನ್ನು ಬರೆದರೆ ಕುಂಡಲಿಯು ತಯಾರಾಗುವದು.

ಜನನಕಾಲದ ಗತ-ಪರಮ-ಏಷ್ಯಗಳನ್ನು ಮಾಡುವ ರೀತಿಯು.

ಆ ದಿವಸ ಜನನ ಕಾಲಕ್ಕೆ ಯಾವ ನಕ್ಷತ್ರವಿದೆಯೆಂದು ನೋಡಿಕೊಂಡು ಮುಂಚಿನ ದಿನ ಆ ನಕ್ಷತ್ರವು ಎಷ್ಟು ಘಟಿ ಸಂದಿದೆಯೆಂಬದನ್ನು ನೋಡಿಕೊಳ್ಳಬೇಕು. ಮುಂಚಿನ ದಿನದ ನಕ್ಷತ್ರದ ಘಟಿಗಳನ್ನು ೬೦ ಘಟಿಗಳಲ್ಲಿ ಕಳೆದರೆ ಉಳಿದದ್ದು ಈ ದಿನದ ನಕ್ಷತ್ರದ (ಪೂರ್ವ ದಿವಸದಲ್ಲಿ ಸಂದ) ಘಟಿಯು ಸಿಗುವದು. ಆ ಸಂದ ಘಟಿಗೆ ಈ ಹೊತ್ತಿನ ಸೂರ್ಯೋದಯಾದಿ ಜನನಕಾಲದ ವರೆಗಿನ ಘಟಿಗಳನ್ನು ಕೂಡಿಸಿದರೆ ಪ್ರಕೃತ ನಕ್ಷತ್ರದ ಜನನಕಾಲಕ್ಕೆ ಸಂದ (ಗತ) ಘಟಿಗಳಾಗುವವು.

ಅದೇ ಹಿಂದಿನ ಸಂದು ಹೋದ ಗಳಿಗೆಗಳಿಗೆ ಈ ಹೊತ್ತು ಇರುವ ಆ ನಕ್ಷತ್ರದ ಪೂರ್ಣ ಘಟಿಗಳನ್ನು ಕೂಡಿಸಿದರೆ ಪರಮ ಘಟಿಯು ಸಿಗುವದು. ಪರಮದಲ್ಲಿ ಗತವನ್ನು ಕಳೆದರೆ ಉಳಿದದ್ದೇ ಶೇಷವಾಗುವದು ಗತ-ಏಷ್ಯ ಘಟಿಗಳನ್ನು ಕೂಡಿಸಿದರೆ ಪರಮ ಘಟಿಗೆ ಸರಿ ಬರಬೇಕು ಅಂದರೆ ತಾಳೆಯು ಬಂದಂತಾಯಿತು.

ಇದೇ ಜಾತಕದ ನಕ್ಷತ್ರ, ಗತ, ಏಷ್ಯ, ಪರಮಗಳನ್ನು ಮಾಡುವಾ–ಶಕೆ ೧೮೫೧ ನೇ ಶುಕ್ಲ ಸಂ। ವೈ। ಶು। ೫। ಸೋಮ। ದಿನ ಪುನರ್ವಸು ನಕ್ಷತ್ರ ೫೦ ಘಟಿ ೧೫ ವಿಘಟಿ ಇರುತ್ತದೆ. (ಪುತ್ತೂರು ವೈಜಯಂತೀ ಪಂಚಾಂಗವನ್ನು ನೋಡಿರಿ) ಆ ದಿನ ಜನನ ಕಾಲದ ಘಟಿ ೧೮ ವಿಘಟಿ ೧೫ ಇರುವದು. ಅಂದಮೇಲೆ ಜನನ ನಕ್ಷತ್ರವು ಪುನರ್ವಸುವೆಂದಾಯಿತು. ಈ ಪುನರ್ವಸು ನಕ್ಷತ್ರವು ಹಿಂದಿನ ದಿನ ಎಷ್ಟು ಘಟಿ ಸಂದಿದೆಯೆಂದು ನೋಡುವದು ಪೂರ್ವದಿನ ಮೃಗ

ನಕ್ಷತ್ರವು ಘಟಿ ೫೪ ವಿಘಟಿ ೧೫
ಶಿರೆಯ ಮೇಲೆ ಉಪರಿಯಾಗಿ ಬಂದ ಆದ್ರಾರ್ ನಕ್ಷತ್ರವು ಘಟಿ ವಿಘಟಿಗಳಿಂದ
ಇರುತ್ತದೆ. ಅದನ್ನು ೬೦ ರಲ್ಲಿ ತೆಗೆದುಹಾಕಬೇಕು. ನಕ್ಷತ್ರವು ಘಟಿಯನ್ನು ತಗೊಂಡು
ಯುಕ್ತವಾಗಿರುವ ಕಾರಣ ೬೦ ಘಟಿಯಲ್ಲಿ ಒಂದು ಘಟಿಯನ್ನು ತಗೊಂಡು
ವಿಘಟಿ ಸ್ಥಾನದಲ್ಲಿಟ್ಟು ಕಳೆಯಬೇಕು. ೫೯ — ೬೦ ರಲ್ಲಿ

ಆದ್ರಾರ್ ನಕ್ಷತ್ರ ೫೪ — ೧೫ ಕಳೆಯಲಾಗಿ

೫ — ೪೫

ನಕ್ಷತ್ರವು ಸಂದಿದೆಯೆಂದು
೫ ಘಟಿ ೪೫ ವಿಘಟಿಗಳು ಹಿಂದಿನ ದಿನ ಪುನರ್ವಸು ನಕ್ಷತ್ರವು ಸಂದಿದೆಯೆಂದು ಜನನ ಕಾಲದ ವರೆಗಿನ ಘಟಿ
ತಿಳಿಯುವದು. ಅದಕ್ಕೆ ಸೂರ್ಯೋದಯಾದಿ ಜನನ ಕಾಲದ ವರೆಗಿನ ಘಟಿ
೧೮ - ೧೫ ನ್ನು ಕೂಡಿಸುವದು ೫ — ೪೫

\+ ೧೮ — ೧೫

೨೪ — ೦ ಘಟಿ ೨೪ ವಿಘಟಿ ೦ ಇದು ಜನನ

ನಕ್ಷತ್ರ ಪುನರ್ವಸುವಿನ ಗತ ಘಟಿಯಾಯಿತು.

ಅದೇ ಪೂರ್ವ ದಿನದಲ್ಲಿ ಸಂದ ೫-೪೫ ಕ್ಕೆ ಈ ದಿನದಲ್ಲಿದ್ದ ಪುನರ್ವಸು
ನಕ್ಷತ್ರದ ಪೂರ್ಣ ಘಟಿ ೫೦-೧೫ ನ್ನು ಕೂಡಿಸಿದರೆ ಪರಮುವಾಗುವದು. ೫ — ೪೫

\+ ೫೦ — ೧೫

೫೬ — ೦

ಈ ಪರಮ ಘಟಿ ೫೬- ಘಟಿ, ೦ ವಿಘಟಿ ಈ ನಕ್ಷತ್ರದ ಪರಮ ಘಟಿಯಾಯಿತು. ಈ ಪರಮ ಘಟಿ
೫೬- ಘಟಿ, ೦ ವಿಘಟಿ ಈ ನಕ್ಷತ್ರದ ಪರಮ ಘಟಿಯಾಯಿತು. ಉಳಿದದ್ದೇ ಏಷ್ಯವಾಗುವದು.
೫೬-೦ ರಲ್ಲಿ ಗತಘಟಿ ೨೪-೦ ವನ್ನು ಕಳಿದರೆ ಉಳಿದದ್ದೇ ಏಷ್ಯವಾಗುವದು.

೫೬ — ೦

೨೪ — ೦

೩೨ — ೦ ಇದು ಏಷ್ಯವಾಯಿತು.

ತಾಳೆ:- ಏಷ್ಯ ೩೨ — ೦

\+ ಗತ ೨೪ — ೦

೫೬ — ೦

ಕೂಡಿಸಲಾಗಿ ೫೬ — ೦

ಅಂತು ಗತಘಟಿ	೨೪ — ೦	ಆದಂತಾಯಿತು.
ಏಷ್ಯ ಘಟಿ	೩೨ — ೦	
ಪರಮ	೫೬ — ೦	

ರಾತ್ರಿ ಜನನಕ್ಕೆ ವಿಶೇಷವು.

ರಾತ್ರಿ ಜನನವಾದರೆ ಸೂರ್ಯಾಸ್ತಾನಂತರ (ರಾತ್ರಿ) ಘಟಿಗಳೆಷ್ಟೋ ಅವುಗಳನ್ನು ಪಂಚಾಂಗದಲ್ಲಿ ಕೊಟ್ಟ ದಿವಾ ಪ್ರಮಾಣಕ್ಕೆ ಕೂಡಿಸಿಕೊಂಡು ಹಿಂದೆ ಹೇಳಿದಂತೆ ಮುಂಚಿನ ದಿನ ಸಂದ ಆ ನಕ್ಷತ್ರದ ಘಟಿಗಳಿಗೆ ಕೂಡಿಸಿದರೆ ಗತ

ವು ಬರುವದು. ಒಂದು ದಿನ ಮೂಲಾ ನಕ್ಷತ್ರವು ೫೩-೪೫ ಇದೆಯೆಂದು ತಿಳಿ
ದುಕೊಳ್ಳಿರಿ. ಆ ದಿನ ರಾತ್ರಿ ಘಟಿ ೧೨-೨೫ ಕ್ಕೆ ಜನನವಿದೆ. ಆ ಮೂಲಾ ನಕ್ಷ
ತ್ರವು ಪೂರ್ವ ದಿನದಲ್ಲಿ ೧೩-೩೦ ಸಂದಿದೆ. ಆ ಕಾಲದಲ್ಲಿ ಪಂಚಾಂಗದಲ್ಲಿದ್ದ
ದಿವಾ ಪ್ರಮಾಣ ೩೧-೫೦ ಇದೆ. ಅದಕ್ಕೆ ರಾತ್ರಿ ಘಟಿ ೧೨-೨೫ ನ್ನು ಕೂಡಿಸಿದರೆ
ಆ ದಿನದ ಸೂರ್ಯೋದಯಾದಿ ಜನನಕಾಲದ ವರೆಗಿನ ಘಟಿಯಾಗುವದು.

ದಿವಾ ಪ್ರಮಾಣ ೩೧ — ೫೦

ರಾತ್ರಿ ಘಟಿ ೧೨ — ೨೫

೪೪ — ೧೫ ಸೂರ್ಯೋದಯಾದಿ ಜನನಕಾಲದವರೆಗಿನ

ಘಟಿಯಾದ ಆ ೪೪-೧೫ ಕ್ಕೆ ಹಿಂದಿನ ದಿನ ಸಂದ ೧೩-೩೦ ನ್ನು ಕೂಡಿಸಿದರೆ ಗತ
ವು ಸಿಗುವದು. ೧೩ — ೩೦

೪೪ — ೧೫

೫೭ — ೪೫ ಇದು ಜನನ ಕಾಲಕ್ಕಾದ ಮೂಲಾ ನಕ್ಷತ್ರದ

ಗತಘಟಿಯಾಯಿತು. ಅದೇ ಹಿಂದಿನ ದಿನ ಸಂದ ೧೩-೩೦ ನ್ನು ಈ ದಿನದಲ್ಲಿದ್ದ
ಮೂಲಾ ನಕ್ಷತ್ರದ ಪೂರ್ಣ ಘಟಿ ೫೩-೪೫ ರಲ್ಲಿ ಕೂಡಿಸಲಾಗಿ ಪರಮವಾಗು
ವದು. ೧೩ — ೩೦

೫೩ — ೪೫

೬೭ — ೧೫ ಇದು ಪರಮವು.

೫೭ — ೪೫ ಈ ಗತವನ್ನು ಕಳೆಯಲಾಗಿ

೯ — ೩೦ ಇದು ಏಷ್ಯವಾಯಿತು.

ಪಂಚಾಂಗದಲ್ಲಿ ನಕ್ಷತ್ರ ಘಟಿಯು ಕಡಿಮೆಯಿದ್ದು ಜನನಕಾಲವು ನಂತರವಾಗಿದ್ದರೆ ವಿಶೇಷವು.

ಒಂದು ದಿನ ಪಂಚಾಂಗದಲ್ಲಿ ಸ್ವಾತಿ ೨೫-೩೦ ಇದೆಯೆಂದು ತಿಳಿದುಕೊಳ್ಳಿರಿ. ಈ ದಿನ ಒಬ್ಬನು ಸೂರ್ಯೋದಯಾದಿ ೨೮-೧೦ ಕ್ಕೆ ಹುಟ್ಟಿರುವನು ಕಾರಣ ಜನ್ಮನಕ್ಷತ್ರವು ಸ್ವಾತಿಯಾಗದೆ ವಿಶಾಖೆಯಾಯಿತು. ವಿಶಾಖೆಯು ಮಾರನೆ ದಿನ ೩೧-೩೦ ಇರುವದು. ಈ ದಿನದಲ್ಲಿರುವ ಜನನಕಾಲದ ಘಟಿ ೨೮-೧೦ ರಲ್ಲಿ ಸ್ವಾತಿ ೨೫-೩೦ ನ್ನು ಕಳೆದರೆ ವಿಶಾಖಾ ಗತವು ಸಿಕ್ಕುವದು.

೨೮ — ೧೦

೨೫ — ೩೦

೨ — ೪೦ ಇದು ಗತವು.

ಈ ದಿನದ ಸ್ವಾತಿ ೨೫-೩೦ ನ್ನು ೫೯-೬೦ ರಲ್ಲಿ ಕಳೆದರೆ ಈ ದಿನದಲ್ಲಿ ಉಳಿದ ವಿಶಾಖೆಯ ಘಟಿಯು ಸಿಗುವದು.

೫೯--೬೦
೨೫--೩೦
———
೩೪--೩೦ ಈ ಹೊತ್ತಿರುವ ವಿಶಾಖೆಯ ಘಟಿಗಳು.

ಇದನ್ನು ಮಾರನೇ ದಿನವಿರುವ ವಿಶಾಖಾ ಘಟಿ ೩೧--೩೦ ರಲ್ಲಿ ಕೂಡಿಸಲಾಗಿ ಪರಮ ಘಟಿಯು ಸಿಗುವದು.

೩೪--೩೦
೩೧—೩೦
———
೬೬-- ೦ ಇದು ಪ್ರಕೃತ ವಿಶಾಖಾ ಪರಮವು.

ಈ ಪರಮ ೬೬-೦ ರಲ್ಲಿ ಗತವಾದ ೨-೪೦ ನ್ನು ಕಳೆದರೆ ಏಷ್ಯಘಟಿ ಯಾಗುವದು.

೬೬-- ೦
೨-- ೪೦
———
೬೩--೨೦ ಇದು ಪ್ರಕೃತ ವಿಶಾಖೆಯ ಏಷ್ಯವು.

ಇತ್ಯಾದಿಯಾಗಿ ಊಹಿಸಿಕೊಳ್ಳಬೇಕು. (ಇದನ್ನು ಬಹಳಾವರ್ತಿ ಮಾಡಿದರೆ ನಂತರ ಸುಲಭವಾಗುವದು.)

ಜನ್ಮ ನಕ್ಷತ್ರದಿಂದ ಜನನಕಾಲದ ಏಷ್ಯದಶೆಯನ್ನು ತೆಗೆಯುವ ರೀತಿಯು.

ಮೊದಲು ಪರಮ ಘಟಿಯನ್ನು ವಿಘಟಿಯನ್ನಾಗಿ ಮಾಡಿಕೊಳ್ಳಬೇಕು. ಅಂದರೆ ೬೦ ರಿಂದ ಗುಣಿಸುವದು. ಮೊದಲಿದ್ದ ವಿಘಟಿಯನ್ನು ಕೂಡಿಸುವದು. ಹೀಗೆ ವಿಘಟಿಯನ್ನು ಮಾಡಿ ಒಂದು ಕಡೆಯಲ್ಲಿ ಬರೆದಿಟ್ಟುಕೊಳ್ಳಬೇಕು. ಇದು ಭಾಜಕವಾಗುವದು.

ಏಷ್ಯ ಘಟಿಯನ್ನು ಹಿಂದೆ ಹೇಳಿದಂತೆ ವಿಘಟಿಗಳನ್ನು ಮಾಡಿಕೊಂಡು ಹಿಂದೆ (ಕೋ. ನಂ. ೬) ಹೇಳಿದಂತೆ ಆ ನಕ್ಷತ್ರಕ್ಕೆ ಯಾವ ಗ್ರಹನ ದಶೆ ಯಾಗುತ್ತದೆಂಬದನ್ನು ತಿಳಿದುಕೊಂಡು ಆ ಗ್ರಹನ ಗ್ರಹದಶಾ ವರ್ಷ ಸಂಖ್ಯೆ ಯಿಂದ ಗುಣಿಸಿ ಬಂದ ಲಬ್ಧವನ್ನು ಭಾಜ್ಯವನ್ನಾಗಿಟ್ಟುಕೊಂಡು ಆ ಪರಮದ ಭಾಜಕದಿಂದ ಭಾಗಿಸಲಾಗಿ ಬಂದ ಲಬ್ಧವು ಏಷ್ಯದಶಾ ವರ್ಷಗಳಾಗುವವು. (ಜನನಕಾಲದಾರಭ್ಯ ಮುಂದೆ ಆ ದಶೆಯ ವರ್ಷವು ಅಷ್ಟಿರುವದೆಂದು ತಿಳಿಯ

ಬೇಕು) ಶೇಷಕ್ಕೆ ೧೨ ರಿಂದ ಗುಣಿಸಿ ಅದೇ ಪರಮದ ಭಾಜಕದಿಂದ ಭಾಗಿಸಲು ಬಂದ ಲಬ್ಧವು ಮಾಸವಾಗುವದು. ಶೇಷಕ್ಕೆ ೩೦ ರಿಂದ ಗುಣಿಸಿ ಅದೇ ಭಾಜಕ ದಿಂದ ಭಾಗಿಸಲಾಗಿ ಬರುವ ಲಬ್ಧವು ದಿನವಾಗುವದು.

ಪ್ರಕೃತ ಉದಾಹರಣೆಯು.

ಈ ಜನನ ಕಾಲದ ಪುನರ್ವಸು ನಕ್ಷತ್ರದ ಪರಮ ಘಟಿ ೫೬-೦ ಇರುವದಷ್ಟೇ? ಅದನ್ನು ೬೦ ರಿಂದ ಗುಣಿಸಲಾಗಿ

೫೬×೬೦
———
(೩೩೬೦)

ಯಿತು. ಇದು ಭಾಜಕವಾಯಿತು. ವಿಘಟಿಗಳು ಮೊದಲು ಇಲ್ಲದ್ದರಿಂದ ಕೂಡಿಸುವದಿರುವದಿಲ್ಲ.

ಏಷ್ಯಘಟಿ ೩೨-೦ ಇದನ್ನು ೬೦ ರಿಂದ ಗುಣಿಸಲಾಗಿ

೩೨×೬೦
———
(೧೯೨೦)

ಕೋಷ್ಟಕ ನಂಬರು ೬ ರ ಪ್ರಕಾರ ಪುನರ್ವಸು ನಕ್ಷತ್ರಕ್ಕೆ ಗುರುದಶೆಯು ಬಂದಿದ್ದು ಆ ಗುರುದಶಾ ವರ್ಷ ಸಂಖ್ಯಾ ೧೬ ರಿಂದ ಗುಣಿಸುವದು

೧೯೨೦×೧೬
———
೧೧೫೨೦
೧೯೨೦
———
೩೦೭೨೦ ಇದೇ ವಿಘಟಿರೂಪವಾದ ಭಾಜ್ಯವಾಯಿತು ಇದನ್ನು ಪೂರ್ವೋಕ್ತ ಭಾಜಕದಿಂದ ಭಾಗಿಸುವದು.

೩೩೬೦) ೩೦೭೨೦ (೯ ಈ ಲಬ್ಧವೇ ಗುರುದಶಾ ಏಷ್ಯ ವರ್ಷವು.
೩೦೨೪೦
———
ಈ ಶೇಷವನ್ನು ೧೨ ರಿಂದ ಗುಣಿಸುವದು. ೪೮೦×೧೨
———
೯೬೦
೪೮೦
———
ಅದೇ ಭಾಜಕದಿಂದ ಭಾಗಿಸುವದು. ೩೩೬೦) ೫೭೬೦ (೧ ಈ ಲಬ್ಧವು ಮಾಸವು
೩೩೬೦
———
ಶೇಷವನ್ನು ೩೦ ರಿಂದ ಗುಣಿಸುವದು. ೨೪೦೦×೩೦
———
ಅದೇ ಭಾಜಕದಿಂದ ಭಾಗಿಸುವದು. ೩೩೬೦) ೭೨೦೦೦ (೨೧ ಈ ಲಬ್ಧವು ದಿನವಾಯಿತು.
೬೭೨೦
———
೪೮೦೦
೩೩೬೦
———
೧೪೪೦

ಅಂತೂ ಜನ್ಮಾದಿ ಗುರು ದಶಾಏಷ್ಯವರ್ಷ ೯, ಮಾಸ ೧, ದಿನ ೨೧ ಆದಂತಾಯಿತು.

ಈ ಜಾತಕನ ಹುಟ್ಟಿದ ದಿನದಿಂದ ವರ್ಷ ೯, ಮಾ. ೧, ದಿ ೨೧ ಇಷ್ಟು ಕಾಲಪರ್ಯಂತ ಗುರುದಶೆ ಇರುತ್ತದೆಂಬ ತಾತ್ಪರ್ಯವು. ಕೋ. ನಂ. ೬ ರ ಪ್ರಕಾರ ಮುಂದೆ ಶನಿದಶೆಯು ಪ್ರಾರಂಭವಾಗುವದು. ಜಾತಕ ಪತ್ರಿಕೆಯಲ್ಲಿ ಏಷ್ಯ (ಮುಂದೆ ಬರುವ) ದಶೆಯನ್ನು ಹಚ್ಚುವರೇ ಹೊರತು ಗತದಶೆಯು ನಿಷ್ಪ್ರಯೋಜಕವಾದುದರಿಂದ ಅದನ್ನು ಹಚ್ಚುವದಿಲ್ಲ. ಆದ್ದರಿಂದಲೇ ಹಿಂದೆ ಹೇಳಿದಂತೆ ಆಯಾಯ ನಕ್ಷತ್ರಕ್ಕೆ ಸರಿಯಾಗಿ ಏಷ್ಯದಶೆಯನ್ನು ಮಾಡಿ ಬರೆದಿಟ್ಟುಕೊಳ್ಳಬೇಕು.

ಕುಂಡಲಿಯಲ್ಲಿ ಗ್ರಹರನ್ನೂ ಗ್ರಹರ ಅಂಶಕವನ್ನೂ ಹಚ್ಚುವ ರೀತಿಯು.

೧೨ ನೇ ಕೋಷ್ಟಕದಿಂದ ಯುಕ್ತವಾದ ಕುಂಡಲಿಯನ್ನು ಪದ್ಧತಿಯಂತೆ ಬರೆದುಕೊಂಡು ಆದಿತ್ಯಾದಿ ಗ್ರಹರು ಯಾವ್ಯಾವ ನಕ್ಷತ್ರದ ಎಷ್ಟನೇ ಪಾದದಲ್ಲಿರುತ್ತಾರೆಂಬದನ್ನು ಪಂಚಾಂಗದಲ್ಲಿರುವ ಚಾರಗಳ ಮೇಲಿಂದ ತಿಳಿದುಕೊಂಡು ಕೋ. ನಂ. ೧೧ ರಲ್ಲಿ ಹೇಳಿದಂತೆ ಯಾವ್ಯಾವ ರಾಶಿಯಲ್ಲಿ ಎಷ್ಟೆಷ್ಟಂಶಕಗಳಿಂದ ಯುಕ್ತರಾಗಿ ಇರುತ್ತಾರೆಂಬದನ್ನು ಬರೆಯಬೇಕು.

ಪ್ರಕೃತ ಉದಾಹರಣ.

ಸೂರ್ಯನು ಕೃತ್ತಿಕಾ ನಕ್ಷತ್ರದ ಮೊದಲನೇ ಪಾದದಲ್ಲಿರುವದರಿಂದ ಆತನು ಮೇಷರಾಶಿಯಲ್ಲಿದ್ದಂತಾಯಿತು. ಕಾರಣ ಅವನಿಗೆ ಮೇಷರಾಶಿಯಲ್ಲಿ ಅಶ್ವಿನಿದು ೪, ಭರಣಿದು ೪, ಕೃತ್ತಿಕೆದು ೧ ಕೂಡಾ ೯ ಅಂಶಕಗಳಾದವು. ಕಾರಣ ಕುಂಡಲಿಯಲ್ಲಿ ಮೇಷದಲ್ಲಿ ಸೂರ್ಯ ಎಂದು ಬರೆದು ಮುಂದೆ ೯ ಅಂಕೆಯನ್ನು ಮಂಡಿಸುವದು. ಇದರಂತೆ ಎಲ್ಲಾ ಗ್ರಹರದ್ದೂ ನೋಡಬೇಕು. ಚಂದ್ರನು ಪುನರ್ವಸು ನಕ್ಷತ್ರದಲ್ಲಿರುವನು. ಪುನರ್ವಸು ನಕ್ಷತ್ರದ ಪರಮ ಘಟಿ ೫೬ ಇದ್ದು ಅದನ್ನು ನಾಲ್ಕುಭಾಗ ಮಾಡಲಾಗಿ ಒಂದೊಂದು ಭಾಗಕ್ಕೆ ೧೪ ಘಟಿಗಳು ಬರುತ್ತವೆ. ಜನ್ಮಕಾಲಕ್ಕೆ ಈ ಪುನರ್ವಸು ಗತಘಟಿ ೨೪ ಇರುವದರಿಂದ (೨೮ ಘಟಿವರೆಗೆ ಪುನರ್ವಸುವಿನ ೨ ನೇ ಪಾದವಿರುವದರಿಂದ) ಪುನರ್ವಸುವಿನ ೨ ನೇ ಪಾದದಲ್ಲಿ ಚಂದ್ರನಿರುತ್ತಾನೆಂದಾಯಿತು. ಚಂದ್ರನ ಅಂಶಕ ಹಚ್ಚುವದಕ್ಕೆ ಇಷ್ಟೇ ವಿಶೇಷವು. ಯಾವ ನಕ್ಷತ್ರದಲ್ಲಿ ಚಂದ್ರನಿರುತ್ತಾನೋ ಆ ನಕ್ಷತ್ರದ ಪರಮವನ್ನು ಮಾಡಿ ೪ ಭಾಗ ಮಾಡುವದು. ಜನನ ಕಾಲದ ಗತಘಟಿಯು ಎಷ್ಟನೇ ಪಾದದಲ್ಲಿ ಬರುತ್ತದೋ ಅದೇ ಪಾದದಲ್ಲಿ ಚಂದ್ರನಿರುತ್ತಾನೆಂಬ ತಾತ್ಪರ್ಯವು. ಕೋ. ನಂ. ೧೧ ರ ಪ್ರಕಾರ ಪುನರ್ವಸುವಿನ ೨ ನೇ ಪಾದದಲ್ಲಿದ್ದರೆ ಮಿಥುನ

ರಾಶಿಯಲ್ಲಿ ೨ ಅಂಶಕಗಳು ಬರುತ್ತವಷ್ಟೇ? ಕಾರಣ ಮಿಥುನ ರಾಶಿಯಲ್ಲಿ ಚಂದ್ರನನ್ನು ಬರೆದು ಮುಂದೆ ೨ ಅಂಶಕಗಳನ್ನು ಬರೆಯುವದು. ಕುಜನೂ ಸಹ ಆ ಕಾಲಕ್ಕೆ ಪುನರ್ವಸುವಿನ ೨ ನೇ ಪಾದದಲ್ಲಿರುವದರಿಂದ ಮಿಥುನದಲ್ಲಿ ಆತನಿಗೆ ೨ ಅಂಶಕಗಳು. ಬುಧನು ರೋಹಿಣಿಯ ನಾಲ್ಕನೇ ಪಾದದಲ್ಲಿರುವದರಿಂದ ವೃಷಭ ರಾಶಿಯಲ್ಲಿಟ್ಟು ೪ ಅಂಶಕಗಳನ್ನು ಬರೆಯುವದು. ಕೃತ್ತಿಕೆಯ ೨ ನೇ ಪಾದದಲ್ಲಿ ಗುರುವಿರುವದರಿಂದ ವೃಷಭರಾಶಿಯಲ್ಲಿ ಗುರುವಿಗೆ ೧೦ ಅಂಶಕವು. ರೇವತಿ ಚತುರ್ಥ ಪಾದದಲ್ಲಿ ಶುಕ್ರನಿರುವದರಿಂದ ಮೀನದಲ್ಲಿ ಆತನಿಗೆ ೧೨ ಅಂಶಕವು. ಮೂಲದಲ್ಲಿ ೩ ನೇ ಪಾದದಲ್ಲಿ ವ. ಶನಿ ಇರುವದರಿಂದ ಧನು ರಾಶಿಯಲ್ಲಿ ಶನಿಗೆ ೩ ಅಂಶಕವು. ಕೃತ್ತಿಕಾ ಪ್ರಥಮ ಪಾದದಲ್ಲಿ ರಾಹುವಿರುವದರಿಂದ ಮೇಷದಲ್ಲಿ ರಾಹುವಿಗೆ ೯ ಅಂಶಕಗಳು. ವಿಶಾಖೆಯ ಮೂರನೇ ಪಾದದಲ್ಲಿ ಕೇತುವಿರುವದರಿಂದ ತುಲೆಯಲ್ಲಿ ೩ ಅಂಶಕವು.

ಲಗ್ನವನ್ನು ಸಾಧಿಸುವ ಕ್ರಮವು.

ಕೋ. ನಂ. ೮ ರ ಪ್ರಕಾರ ಆಯಾಯ ತಿಂಗಳಿಗೆ ಹೇಳಲ್ಪಟ್ಟ ಕ್ರಮದಂತೆ ಘಟಿಗಳನ್ನು ತಿಳಿದುಕೊಂಡು ಆಯಾಯ ತಿಂಗಳಲ್ಲಿಸೂರ್ಯೋದಯಕ್ಕೆ ಪ್ರತಿದಿನದಲ್ಲಿ ಸಲ್ಲುವ ಘಟಿಗಳನ್ನು ವಜಾ ಮಾಡಿ ಮುಂದೆ ಆಯಾಯ ರಾಶಿಯ ಘಟಿಗಳನ್ನು ಕೂಡಿಸುತ್ತ ಸೂರ್ಯೋದಯಾದಿ ಜನನ ಕಾಲದ ವರೆಗೆ ಕೂಡಿಸುತ್ತಾ ಬರುವದು. ಯಾವ ರಾಶಿಯ ಘಟಿಗಳಲ್ಲಿ ಜನನ ಕಾಲವೋ ಅದೇ ಜನನ ಕಾಲದ ಲಗ್ನವಾಗುವದು.

ಪ್ರಕೃತ ಉದಾಹರಣ.

ಶಕೆ ೧೮೫೧ ನೇ ವೈ. ಶು. ೫ ಯು ಮೇಷ ತಿಂಗಳಲ್ಲಾಗಿರುತ್ತದೆ. ಪಂಚಮಿಗೆ ಮೇಷ ತಿಂಗಳ ೨೯ ದಿನಗಳು ಸಂದಿವೆ. ಮೇಷ ತಿಂಗಳ ದಿನ ಒಂದರ ಸೂರ್ಯೋದಯಕ್ಕೆ ಸಲುವ ವಿಘಟಿ (ಧಾನಂ) ೮ ಇದನ್ನು ೨೯ ರಿಂದ ಗುಣಿಸಲಾಗಿ ೨೯×೮=೨೩೨. ಇದಕ್ಕೆ ಘಟಿ ಮಾಡುವದು ಅಂದರೆ ೬೦ ರಿಂದ ಭಾಗಿಸಿ ಬಂದ ಲಬ್ಧವು ಘಟಿಯು. ಶೇಷವು ವಿಘಟಿಯು. ೬೦) ೨೩೨ (೩

೧೮೦

———

೫೨

೩ ಘಟಿ ೫೨ ವಿಘಟಿ ಸಂದಹಾಗಾಯಿತು. ಮೇಷದ ಘಟಿ......(ಕೋ. ನಂ. ೮)

ಜನತ್ವ, ೪-೮ ರಲ್ಲಿ ವಜಾ ಮಾಡಲಾಗಿ ೪-೮
೩-೫೨
೦-೧೬ ಬರೇ ವಿಘಟಿಗಳು ಉಳಿದವು. ಅಂದರೆ ಸೂರ್ಯೋದಯಕ್ಕೆ ಮುಂಚೆ ೬ ವಿಘಟಿ ಪರ್ಯಂತ ಮೇಷವಿದೆಯೆಂದು ತಿಳಿಯುವದು. ಮುಂದೆ ಜನನ ಕಾಲದ ಘಟಿವರೆಗೆ ಕೂಡಿಸುತ್ತಾ ಹೋಗುವದು.

ಮೇಷ ೦-೧೬
ವೃಷಭ ೪-೩೫
ಮಿಥುನ ೫-೧೩
ಕರ್ಕಟಕ ೫-೨೩
೧೫-೨೭ ಇಷ್ಟು ಘಟಿಗಳವರೆಗೆ ಕರ್ಕಟಕವಿರುವದು. ಮುಂದಿ ಸಿಂಹದ ಘಟಿಯು ಪ್ರಾರಂಭವಾಗುವದು. ಅದನ್ನು ಆ ೧೫-೨೭ ಕ್ಕೆ ಕೂಡಿಸಿದರೆ ೧೫--೨೭
೫--೨೩
೨೦--೫೦

೧೫-೨೭ ರ ಮೇಲೆ ೨೦-೫೦ ಘಟಿವರೆಗೆ ಸಿಂಹಲಗ್ನವಾಗುವದು. ಜನನ ಕಾಲದ ಘಟಿ ೧೮-೧೫ ಇದ್ದು ಅದು ಸಿಂಹರಾಶಿಯಲ್ಲಿ ಬಂದಿರುವದರಿಂದ ಜನನ ಲಗ್ನವು ಸಿಂಹವಾಯಿತೆಂಬುವದು ಸ್ಪಷ್ಟವು.

ಜಾತಕ ಬರೆಯುವ ಪದ್ಧತಿ.

ಅಂಚಿತ್ಯಾವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೇ ।
ಸಮಸ್ತಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ ॥

ಸ್ವಸ್ತಿ ಶ್ರೀಮಜ್ಜಯಾಭ್ಯುದಯ ನೃಪತುಂಗ ಶಾಲಿವಾಹನ ಶಕ ವರ್ಷ ೧೮೫೧ ಶುಕ್ಲ ಸಂವತ್ಸರ ವೈಶಾಖ ಶುಕ್ಲ ೫ ಸೋಮವಾರ ೩೪-೨೫ ಪುನರ್ವಸು ೫೦।೨೫। ಶೂ ।೩೮।೩೦। ಬ ।೭।೪೫। ವಿ ।೨೨।೩೦। ಅ ।೪೪।೨೫ ಏವಂ ಪಂಚಾಂಗಂ। ಏತದ್ದಿನ ಸೂರ್ಯೋದಯಾದಿ ಘ ।೧೮ ವಿ ।೧೫। ಸಮಯೇ ದೇವದತ್ತ ಶರ್ಮಣೋಭಾರ್ಯಾ ಕಮಲಾ ದೇವೀ ರಾಮದತ್ತಾಖ್ಯಂ ಪುತ್ರರತ್ನಂ ಪ್ರಸೂತ। ಪುನರ್ವಸು ಗತಘಟಿ ೨೪-೦ ಏಷ್ಯಘಟಿ ೩೨-೦ ಪರಮ ಘಟಿ ೫೬-೦ ಜನ್ಮಾದಿ ಗುರುದಶಾ ಏಷ್ಯವರ್ಷ ೯, ಮಾಸ ೧, ದಿ. ೨೧ ಉಪರಿ ಶನಿದಶಾ ವರ್ಷ ೧೯.

ಶುಕ್ರಃ ೧೨	ಸೂರ್ಯಃ ೯ ರಾಹುಃ ೯	ಬುಧಃ ೪ ಗುರುಃ ೧೦	ಚಂದ್ರಃ ೨ ಕುಃ ೨
	(ಶ್ರೀಃ)		
	॥ ರಾಮದತ್ತನ ಜನ್ಮಕುಂಡಲಿ ॥		ಲಗ್ನವು
ಶನಿಃ ೩		ಕೇತುಃ ೩	

ದಶಾಭುಕ್ತಿಯನ್ನು ಮಾಡುವ ಕ್ರಮವು. (ವಿಂಶೋತ್ತರೀ)

ಯಾವುದಾದರೊಂದು ದಶೆಯಲ್ಲಿ ಆ ಭುಕ್ತಿ ಮಾಡುವದಾದರೆ ದಶಾಕಾರಕನ ವರ್ಷ ಸಂಖ್ಯೆಯನ್ನು ಭುಕ್ತಿಕಾರಕನ ವರ್ಷದಿಂದ ಗುಣಿಸಬೇಕು. ಎಡದ (ಆದಿಯ) ಅಂಕೆಯು ತಿಂಗಳಾಗುವದು. ಬಲದ (ತುದಿಯ) ಅಂಕೆಯನ್ನು ೩ ರಿಂದ ಗುಣಿಸಿದರೆ ಬರುವ ಸಂಖ್ಯೆಗಳು ದಿನಗಳಾಗುವವು. ಹಿಂದೆ ಬರೆದ ಕೋ. ನಂ. ೧೨ ನ್ನು ನೋಡಿಕೊಂಡರೆ ಯಾವ ದಶೆಯಾದ ಮೇಲೆ ಯಾವ ದಶೆಯು ಪ್ರಾರಂಭವಾಗುತ್ತದೆಯೆಂದು ತಿಳಿಯುವದು. ದಶಾಕಾರಕ ಗ್ರಹಗಳ ಕ್ರಮದಂತೆಯೇ ಭುಕ್ತಿಕಾರಕ ಗ್ರಹಗಳದ್ದೂ ಸಹ ತಿಳಿಯಬೇಕು. ಆಯಾಯ ದಶೆಯಲ್ಲಿ ಆಯಾಯ ಭುಕ್ತಿಯು ಮೊದಲು ಬರುವದು. ಉದಾಹರಣಾರ್ಥ—ಸೂರ್ಯದಶೆಯಲ್ಲಿ ಮೊದಲು ಸೂರ್ಯಭುಕ್ತಿಯು. ಆ ಮೇಲೆ ಚಂದ್ರ, ನಂತರ ಕುಜ, ಆ ಮೇಲೆ ರಾಹು, ಮೇಲೆ ಗುರು, ಶನಿ, ಬುಧ, ಕೇತು, ಶುಕ್ರ ಹೀಗೆ ಪ್ರತಿಯೊಂದು ದಶೆಯಲ್ಲೂ ಇದೇ ಕ್ರಮವನ್ನನುಸರಿಸಿ ದಶಾಭುಕ್ತಿಗಳನ್ನು ಕಂಡುಕೊಳ್ಳಬೇಕು.

ಪ್ರಕೃತ ಈ ಜಾತಕನಿಗೆ ಜನ್ಮಾದಿ ಗುರು ದಶಾ ಶಿಷ್ಟವರ್ಷ ೯, ಮಾ. ೧, ದಿ. ೨೧ ಇರುವದು. ಮುಂದೆ ಶನಿದಶೆಯು ಪ್ರಾರಂಭವಾಗುವದು. ಶನಿದಶಾ ವರ್ಷ ೧೯ ಕೂಡಿಸಲಾಗಿ ೨೮ ವ, ೧ ಮಾಸ, ೨೧ ದಿನಗಳ ವರೆಗೆ ಶನಿದಶೆಯಿರುವದು. ಮುಂದೆ ೧೭ ವರ್ಷ ಅಂದರೆ ೪೫ ವ, ೧ ಮಾ. ೨೧ ದಿನಗಳ ವರೆಗೆ ಬುಧದಶೆಯಿರುವದು. ಹೀಗೆಯೇ ಆಯಾಯ ದಶೆಯ ವರ್ಷಗಳನ್ನು ಕೂಡಿಸಿಕೊಂಡು ದಶೆಗಳನ್ನು ತಿಳಿದುಕೊಳ್ಳಬೇಕು.

ಭುಕ್ತಿಯನ್ನು ಮಾಡುವ ರೀತಿ.

ಸೂರ್ಯ ದಶಾವರ್ಷ ೬. ಮೊದಲು ಬರುವದು ಅದೇ ಸೂರ್ಯ ಭುಕ್ತಿಯು. ಕಾರಣ ಆದಶಾ ವರ್ಷ ೬ ಕ್ಕೆ ಅದೇ ಭುಕ್ತಿಕಾರಕ ಸೂರ್ಯನ ವರ್ಷ ೬ ರಿಂದ ಗುಣಿಸುವದು ೬×೬=೩೬. ಇಲ್ಲಿ ಎಡದ ಅಂಕೆಯು ೩ ತಿಂಗಳು. ಬಲದ ಅಂಕೆಯಾದ ೬ ನ್ನು ೩ ರಿಂದ ಗುಣಿಸುವದು ೬×೩ ೧೮ ಇದು ದಿನಗಳಾದವು. ಅಂತು ೩ ತಿಂಗಳು ೧೮ ದಿನಗಳು ಸೂರ್ಯ ದಶೆಯಲ್ಲಿ ಸೂರ್ಯಭುಕ್ತಿಯಾಯಿತು. ಆ ಮೇಲೆ ಚಂದ್ರ ಭುಕ್ತಿಯು. ಚಂದ್ರನ ವರ್ಷ ೧೦. ಇದಕ್ಕೆ ದಶಾಕಾರಕ ಸೂರ್ಯನ ವರ್ಷ ೬ ರಿಂದ ಗುಣಿಸುವದು. ೧೦×೬=೬೦. ಎಡದ ಅಂಕೆಯು ೬. ಇದು ತಿಂಗಳು ಬಲಗಡೆಯ ಅಂಕೆಯು ೦ ಇರುವದರಿಂದ ದಿನಗಳು ಶೂನ್ಯವಾಯಿತು. ಅಂತೂ ಸೂರ್ಯ ದಶೆಯಲ್ಲಿ ಚಂದ್ರನ ಭುಕ್ತಿಯು ೬ ತಿಂಗಳು. ಆ ಮೇಲೆ ಕುಜನು. ಕುಜ ವರ್ಷ ೭ ರಿಂದ ಆ ೬ ನ್ನು ಗುಣಿಸಲಾಗಿ ೬×೭=೪೨. ಇಲ್ಲಿ ಎಡದ ಅಂಕೆಯಾದ ೪ ತಿಂಗಳಾಯಿತು. ಬಲದ ಅಂಕೆಯಾದ ೨ ನ್ನು ಮೂರರಿಂದ ಗುಣಿಸಲಾಗಿ ೨×೩=೬ ದಿನಗಳಾದವು. ಅಂತೂ ಸೂರ್ಯದಶೆಯಲ್ಲಿ ಕುಜಭುಕ್ತಿಯು ೪ ತಿಂಗಳು ೬ ದಿನಗಳು. ಇದರಂತೆ ಪ್ರತಿಯೊಂದು ಗ್ರಹಗಳಲ್ಲಿ ಪ್ರತಿಯೊಂದು ಭುಕ್ತಿಯನ್ನು ಮೇಲೆ ಬರೆದಂತೆಯೇ ಗುಣಿಸಿ ದಶಾಭುಕ್ತಿಗಳನ್ನು ಕೋ. ನಂ. ೧೨ ರ ಪ್ರಕಾರ ತಿಳಿದುಕೊಳ್ಳಬೇಕು. (ಪಾಪ ಗ್ರಹದಶಾಭುಕ್ತಿಗಳು ಪಾಪಫಲವನ್ನೂ ಶುಭಗ್ರಹರದಶಾ ಭುಕ್ತಿಗಳು ಶುಭಫಲವನ್ನೂ ಕೊಡುತ್ತವೆಂದು ಸಾಮಾನ್ಯ ನಿಯಮವಿರುವದು.) ಗ್ರಹದಶೆಗಳ ಭು. ದೋಷ ಪರಿಹಾರಕ್ಕಾಗಿ ದಾನಮಾನಾದಿಗಳನ್ನು ಮಾಡುವ ಕ್ರಮವನ್ನು ಕೋ। ನಂ। ೧೩ ರಿಂದ ತಿಳಿಯಬೇಕು.

ಉಪಸಂಹಾರ.

ಈ ಪುಸ್ತಕದಲ್ಲಿ ಸಾಮಾನ್ಯವಾಗಿ ಸಾದಾ ಜಾತಕವನ್ನು ಸ್ವತಃ ಕಲಿಯುವಂತೆ ಉದಾಹರಣ ಸಹಿತವಾಗಿ ಬರೆದಿರುತ್ತೇನೆ. ಷಡ್ವರ್ಗ, ಗ್ರಹಸ್ಫುಟಾದಿಗಣಿತ ಕಾರ್ಯಗಳು ಗುರುಮುಖದಹೊರತು ಸ್ಪಷ್ಟವಾಗಿ ತಿಳಿಯುವದಿಲ್ಲವಾದಕಾರಣ ಅವನ್ನು ಇದರಲ್ಲಿ ಕೊಡಲಿಲ್ಲ.

ನಮ್ಮ ಜ್ಯೋತಿಷ ಕಾರ್ಯಾಲಯಕ್ಕೆ ಬಂದರೆ ಸುವಿಸ್ಪಷ್ಟವಾಗಿ ಕಾಲವಿಲಂಬವಾಗದಂತೆ ಗಣಿತದ ಎಲ್ಲಾ ಕಾರ್ಯಗಳನ್ನು (ಆಯುರ್ದಾಯಾಂತ) ಕಲಿಸಿಕೊಡುವೆವು. ಇದಲ್ಲದೆ ಮುಹೂರ್ತ ಶಾಸ್ತ್ರ, ಫಲಶಾಸ್ತ್ರಗಳ ಪಾಠವನ್ನೂ ಸುಧಾರಿಸಿದ ಪದ್ಧತಿಯಿಂದ ಕಲಿಸಿಕೊಡುವೆವು.

ಮತ್ತು ಈ ಕಾರ್ಯಾಲಯಕ್ಕೆ ಶಂಕರಾರ್ಯ ಸಂಸ್ಕೃತಶಾಲೆಯು ಜೋಡಿಸಲ್ಪಟ್ಟಿರುವದರಿಂದ ಸಂಸ್ಕೃತ ಸಾಹಿತ್ಯವನ್ನು ಕಲಿತುಕೊಂಡು ಜ್ಯೋತಿಷವನ್ನು ಕಲಿಯಲಿಕ್ಕೆ ಸಹ ತುಂಬಾ ಅನುಕೂಲವಾಗಿರುವದು. ಕನ್ನಡ ಬಾಂಧವರು ನಮ್ಮ ಫಲಜ್ಯೋತಿಷದ ಅನುಭವವನ್ನು ತಗೊಂಡು ಆನಂದ ಪಡುತ್ತಲಿರುವರು. ವಿದ್ಯಾರ್ಥಿಗಳನ್ನು ಕಳಿಸುವವರು ತ್ವರೆಯಿಂದ ಕಳಿಸಬೇಕು.

ವಿಶೇಷ ಮಾಹಿತಿಯನ್ನು ಪತ್ರದ್ವಾರಾ ತಿಳಿಯುವದು.

ಕನ್ನಡಿಗರ ನಮ್ರ ಸೇವಕ

ಮೆನೇಜರ,

ಜ್ಯೋತಿಷ ಕಾರ್ಯಾಲಯ–ನಾಜಗಾರ,

ಪೋ. ಕಾಸರಕೋಡ (ಹೊನ್ನಾವರ)

ಜಿ. ಕಾರವಾರ.

ವಿವಾಹ ಜ್ಯೋತಿಷ

ಅಥವಾ

ವಧೂವರರ ಮೇಳಾನಿರ್ಣಯ.

ಸಂಸಾರದಲ್ಲಿ ಸ್ತ್ರೀಪುರುಷರ ಸಂಬಂಧವು ಸರಿಯಿಲ್ಲದೆ ಅನೇಕ ತೊಂದರೆಗಳನ್ನನುಭವಿಸುವದನ್ನು ಕಣ್ಣಾರೆ ಕಾಣುವೆವು. 'ಯತ್ರಾನುಕೂಲ್ಯಂದಂಪತ್ಯೋಸ್ತ್ರಿವರ್ಗಸ್ತತ್ರ ವರ್ಧತೇ' ಎಂಬಂತೆ ಅನುಕೂಲದಾಂಪತ್ಯವೇ ನಿಜವಾದ ಸ್ವರ್ಗವು. ಅದಕ್ಕೆ ಗ್ರಹಯೋಗವೇ ಮುಖ್ಯಕಾರಣವೆಂದು ಶಾಸ್ತ್ರಸಿದ್ಧಾಂತ ಮತ್ತು ಪ್ರತಿ ಊರಲ್ಲಿಯೂ ಮಾತ್ಸರ್ಯ ದ್ವೇಷಾದಿಗಳು ಜನರಲ್ಲಿ ತುಂಬಿರುವದರಿಂದ ಜ್ಯೋಯಿಸರನ್ನಂಕೆಯಲ್ಲಿಟ್ಟುಕೊಂಡು ಅನುಕೂಲದಂತೆ ವಿವಾಹ ಮಾಡಿಕೊಂಡು ಅನರ್ಥ ಹೊಂದುತ್ತಿರುವರು.

ಇಡೀ ಆಯುಷ್ಯದಲ್ಲಿ ವಿವಾಹಕಾಲವು ಮಹತ್ವದ್ದಿರುವದರಿಂದ ಪಕ್ಷಪಾತವಿಲ್ಲದಂತೆ ಜಾತಕ ಯೋಗಗಳನ್ನು ನೋಡಿಸಿಯೇ ಲಗ್ನಮಾಡುವದವಶ್ಯವು. ಈಗಿನ ಕಾಲದಲ್ಲೆಷ್ಟೋ ಕಡೆಯಲ್ಲಿ ಮೇಳಾಮೇಳಿ ನೋಡುವ ಕ್ರಮವು ತೀರ ತಪ್ಪಿರುತ್ತದೆ. ಗ್ರಹಸ್ಪಷ್ಟ ಭಾವಸ್ಪಷ್ಟ ಸಂಧಿಗಳನ್ನು ಮಾಡಿದ ಹೊರತು ಅಂಗಾರಕಾದಿ ಗ್ರಹರ ನಿಜಸ್ಥಾನವು ಸರಿಯಾಗಿ ತಿಳಿಯದೆ ಯದ್ವಾತದ್ವಾ ಆಗುವದು. ಇಂಥಾ ಪರಿಸ್ಥಿತಿಯನ್ನು ನೋಡಿ ಜೋಯಿಸರ ಸನ್ನಿಧಿಗೆ ಹೋಗದೇನೇ ಮನೆಯಲ್ಲಿಯೇ ಮೇಲಿನ ಸಂಬಂಧಿ ವಿಚಾರವು ಸಶಾಸ್ತ್ರವಾಗಿ ಜನರಿಗೆ ದೊರೆಯಬೇಕೆಂಬ ಸದ್ಧೇತುವಿನಿಂದ ಈ ಜ್ಯೋತಿಷ ಕಾರ್ಯಕಲಾಪವನ್ನಾರಂಭಿಸಿದ್ದಾಗಿದೆ.

ಲಗ್ನ ಮಾಡಬೇಕಾದ ವಧೂವರರ ಜಾತಕಗಳನ್ನು ಕವರಿನಲ್ಲಿ ೪ ಆಣೆ ಸ್ಟ್ಯಾಂಪಿನೊಂದಿಗಿಟ್ಟು ಕಳಿಸತಕ್ಕದ್ದು. ಅದನ್ನು ವಜಾಮಾಡಿ ೧—೦—೦ ಗೆ ವ್ಹಿ. ಪಿ. ಯಿಂದ ಕಳಿಸುವೆವು. ನಮ್ಮ ವಿಚಾರವು ಶಾಸ್ತ್ರಸಮ್ಮತವಲ್ಲವೆಂದು ಸಿದ್ಧಪಡಿಸಿದರೆ ಹಣವು ಪರತ್ ಕೊಡಲ್ಪಡುವದು. ಜನ್ಮಟಿಪ್ಪಣಿಯು ಖೊಟ್ಟಿಯಾಗಿದ್ದರೆ ಕಾರ್ಯಾಲಯವು ಜವಾಬದಾರಿಯಲ್ಲ.

ನಮ್ಮ ವಿಳಾಸ—

ಮೆನೇಜರ,

ಜ್ಯೋತಿಷ ಕಾರ್ಯಾಲಯ-ನಾಜಗಾರ,

ಪೋ. ಕಾಸರಕೋಡ, (ಹೊನ್ನಾವರ)

ಜಿ. ಕಾರವಾರ.